ಸಂಪುಟ 01 | ಸಂಚಿಕೆ 142 | ಶನಿವಾರ 11 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಸುರಕ್ಷಿತ ತಾಯ್ತನ ದಿನ (NSMD)**
ಪ್ರತಿ ವರ್ಷ ಏಪ್ರಿಲ್ 11 ರಂದು ಓಖಒಆ ಯನ್ನು ಆಚ-ರಿಸಲಾಗುತ್ತದೆ, ಇದು ಮಾತೃತ್ವ ಸೌಲಭ್ಯಗಳು, ಹಾಲುಣಿಸುವ ಮಹಿಳೆಯರ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಹಿಳೆಯ-ರಿಗೆ ನೀಡಲಾಗುವ ಸರಿಯಾದ ಆರೋಗ್ಯ ರಕ್ಷಣೆಗಾಗಿ

**2) ವಿಶ್ವ ಪಾರ್ಕಿನ್ಸನ್ ದಿನ**
ನರವೈಜ್ಞಾನಿಕ ವ್ಯವಸ್ಥೆಯ ಕ್ಷೀಣಗೊಳ್ಳುವ ಈ ಸ್ಥಿತಿಯ ಬಗ್ಗೆ ಗಮನ ಸೆಳೆಯಲು ಪ್ರತಿ ವರ್ಷ ಏಪ್ರಿಲ್ 11 ರಂದು ವಿಶ್ವ ಪಾರ್ಕಿನ್ಸನ್ ದಿನವನ್ನು ಆಚರಿಸಲಾಗುತ್ತದೆ. ಪಾರ್ಕಿನ್ಸನ್ ಫೌಂಡೇಶನ್‌ನ ಇತ್ತೀಚಿನ ಮಾಹಿತಿಯ ಪ್ರಕಾರ, ವಿಶ್ವಾದ್ಯಂತ 10 ದಶಲಕ್ಷಕ್ಕೂ ಹೆಚ್ಚು ಜನರು ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದಾರೆ.

## ಸುಭಾಷಿತ

ಮನಸ್ಸಿಗೆ ಮುದ ನೀಡುವ ಕಾರ್ಯದಲ್ಲಿ ನೀನು ಖಂಡಿತ ಜಯ ಪಡೆಯುವೆ.

–ಸಿದ್ದೇಶ್ವರ ಸ್ವಾಮೀಜಿ

# ಟ್ರಂಪ್ ಚೀನಾ ಭೇಟಿಗೂ ಮುನ್ನ ಬೀಜಿಂಗ್‌ನಲ್ಲಿ ತೈವಾನ್ ವಿಪಕ್ಷ ನಾಯಕಿ ಭೇಟಿ ಮಾಡಿದ ಶಿ ಜಿನ್‌ಪಿಂಗ್

**ಬೀಜಿಂಗ್: ಮುಂದಿನ ತಿಂಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚೀನಾ ಭೇಟಿಗೆ ಮುನ್ನ ಚೀನಾ ಅಧ್ಯಕ್ಷ ಕ್ಸಿಜಿನ್ ಪಿಂಗ್ ಅವರು ಬೀಜಿಂಗ್‌ನಲ್ಲಿ ತೈವಾನ್‌ನ ವಿರೋಧ ಪಕ್ಷದ ನಾಯಕಿ ಚೆಂಗ್ ಲಿ-ವುನ್ ಅವರನ್ನು ಭೇಟಿ ಮಾಡಿದ್ದಾರೆ.**

ಚೆಂಗ್ ಅವರು ಕಳೆದ ದಶಕದಲ್ಲಿ ಚೀನಾದ ಮುಖ್ಯಭೂಮಿಗೆ ವಾರಪೂರ್ತಿ ಭೇಟಿ ನೀಡಿದ ಮೊದಲ ಕುವೊಮಿಂಟಾಂಗ್ ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರ ಕ್ಸಿಜಿನ್ ಪಿಂಗ್ ಮತ್ತು ಶಿಜಿನ್‌ಪಿಂಗ್ ಅವರ ಭೇಟಿಯನ್ನು ಜಾಗತಿಕವಾಗಿ ಗಮನಿಸಲಾಗುತ್ತಿದೆ. ಚೀನಾ ತೈವಾನ್ ತನ್ನ ಭಾಗವೆಂದು ಹೇಳಿಕೊಂಡಿದ್ದು, ಅದನ್ನು ತನ್ನ ವಶಕ್ಕೆ ಪಡೆಯಲು ಪ್ರತಿಜ್ಞೆ ಮಾಡಿದೆ. ಚೀನಾ ತೈವಾನ್‌ನ ಆಡಳಿತ ಪಕ್ಷವಾದ ಅನ್ನು ಪ್ರತ್ಯೇಕತಾವಾದಿ ಎಂದು ಕರೆಯುತ್ತಿದ್ದು, ಚೀನಾದೊಂದಿಗೆ ಹತ್ತಿರದ ಸಂಬಂಧವನ್ನು ಬೆಂಬಲಿಸುವ ಗೆ ಪರೋಕ್ಷ ಬೆಂಬಲ ನೀಡುತ್ತದೆ. ಇದರ ವಿರುದ್ಧವಾಗಿ ಡೆಮಾಕ್ರಟಿಕ್ ಪ್ರೋಗ್ರೆಸ್ಸಿವ್ ಪಾರ್ಟಿ ಚೀನಾದ ಪ್ರಯತ್ನಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದು, ತೈವಾನ್ ತನ್ನ ಸ್ವತಂತ್ರ ಗುರುತನ್ನು ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತದೆ.

ಬೀಜಿಂಗ್‌ಗೆ ಹೊರಡುವ ಮುನ್ನ ಚೆಂಗ್ ಅವರು ಈ ಭೇಟಿಯನ್ನು ಶಾಂತಿಯ ಪ್ರಯಾಣ ಎಂದು ಕರೆದು, ತೈವಾನ್ ಸಮುದ್ರಸಂಧಿಯ



ಎರಡೂ ಬದಿಗಳು ಸಂವಾದ ಮತ್ತು ಸಂಪರ್ಕದ ಮೂಲಕ ತಮ ಭಿನ್ನಾಭಿಪ್ರಾಯಗಳನ್ನು ಪರಿಹ-ರಿಸಬೇಕು ಎಂದು ಚೆಂಗ್ ಲಿ-ವುನ್ ಹೇಳಿದರು. ಅಂತರರಾಷ್ಟ್ರೀಯ ಪರಿಸ್ಥಿತಿ ಅಸ್ಥಿರವಾಗಿದೆ, ಸಂಘರ್ಷಗಳು ಹೆಚ್ಚುತ್ತಿವೆ ಮತ್ತು ಜನರಲ್ಲಿ ಆತಂಕವೂ ಹೆಚ್ಚುತ್ತಿದೆ. ತೈವಾನ್ ಸಮುದ್ರಸಂಧಿಯನ್ನು ವಿಶ್ವದ ಅತ್ಯಂತ ಅಪಾಯಕಾರಿ ಪ್ರದೇಶಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಆದ-ದ್ರಿಂದ, ಸಮುದ್ರಸಂಧಿ ಸುರಕ್ಷಿತವಾಗಿದ್ದರೆ ವಿಶ್ವವೂ ಸುರಕ್ಷಿತವಾಗಿರುತ್ತದೆ ಎಂದು ಅವರು ಹೇಳಿದರು. ಚೆಂಗ್ ಅವರ ಈ ಭೇಟಿ ಮಹತ್ವದ್ದಾಗಿದೆ, ಏಕೆಂದರೆ ಇದು ಮೇ 14-15ರಂದು ನಡೆಯಲಿರುವ ಟ್ರಂಪ್ ಅವರ ಬೀಜಿಂಗ್ ಪ್ರವಾಸದ ಮುನ್ನ ನಡೆದಿದೆ. ಆ ವೇಳೆ ತೈವಾನ್ ವಿಷಯವು ಅವರ ಮತ್ತು ಶಿ ಅವರ ಮಾತುಕತೆಯಲ್ಲಿ ಪ್ರಮುಖವಾಗಲಿದೆ.

ಅಮೆರಿಕಾ ತೈವಾನ್‌ಗೆ ಸುಮಾರು 11 ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಲು ಯೋಜಿಸಿದೆ, ಇದು ಇದುವರೆಗೆ ಅತ್ಯಂತ ದೊಡ್ಡ ಪ್ಯಾಕೇಜ್ ಆಗಿದೆ ಈ ಒಪ್ಪಂದದಲ್ಲಿ ರಾಕೆಟ್ ವ್ಯವಸ್ಥೆಗಳು, ಆಂಟಿ-ಟ್ಯಾಂಕ್ ಕ್ಷಿಪಣಿಗಳು, ಆಂಟಿ-ಆರ್ಮರ್ ಕ್ಷಿಪಣಿಗಳು, ಲೋಯಿಟರಿಂಗ್ ಡ್ರೋನ್‌ಗಳು, ಹೌಟ್ಸರ್ ಗನ್‌ಗಳು, ಸೈನಿಕ ಸಾಫ್ಟ್ ವೇರ್ ಹಾಗೂ ಇತರ ಉಪಕರಣಗಳ ಭಾಗಗಳು ಸೇರಿವೆ. ಚೀನಾ ಈ ಒಪ್ಪಂದವನ್ನು ದೃಢವಾಗಿ ವಿರೋಧಿಸುತ್ತೇವೆ ಮತ್ತು ಖಂಡಿಸುತ್ತೇವೆಎಂದು ಹೇಳಿದೆ.ಇನ್ನೊಂದೆಡೆ, ಈ ಒಪ್ಪಂದವನ್ನು ಬಳಸಿಕೊಳ್ಳಲು ತೈವಾನ್ ಸರ್ಕಾರ ಈ ವರ್ಷದ ರಕ್ಷಣಾ ಬಜೆಟ್ ಅನ್ನು ಸಂಸತ್ತಿನಲ್ಲಿ ಅಂಗೀಕರಿಸಲು ಕಷ್ಟ ಅನುಭವಿಸುತ್ತಿದೆ, ಏಕೆಂದರೆ ಪ್ರತಿಪಕ್ಷದ ಪ್ರಾಬಲ್ಯ ಇರುವ ಸಂಸತ್ತು ಇದನ್ನು ತಡೆಹಿಡಿದಿದೆ. ಹಿಂದಿನ ವಾರ ಅಮೆರಿಕದ ದ್ವಿಪಕ್ಷೀಯ ಪ್ರತಿನಿಧಿ ಮಂಡಳಿ ತೈಪೇಗೆ ಭೇಟಿ ನೀಡಿ 40 ಬಿಲಿಯನ್ ಡಾಲರ್ ವಿಶೇಷ ರಕ್ಷಣಾ ವೆಚ್ಚ ಬಜೆಟ್ ಅನ್ನು ಅಂಗೀಕರಿಸಲು ಒತ್ತಾಯಿಸಿತು. ಆದ-ರೆ ಪ್ರತಿಪಕ್ಷ ನಾಯಕ ಚೆಂಗ್ ಅವರು ಈ ಭೇಟಿ ತೈವಾನ್ ಜನರ ಮುಖ್ಯ ಧೋರಣೆಯೊಂದಿಗೇ ಹೊಂದಿಕೆಯಾಗುತ್ತದೆ ಎಂದು ಹೇಳಿದ್ದಾರೆ. ಪ್ರಾದೇಶಿಕ ಸ್ಥಿರತೆಗಾಗಿ ಮತ್ತು ಮುಂದಿನ ತಲೆಮಾ-ರಿನ ಕಲ್ಯಾಣಕ್ಕಾಗಿ, ನಾವು ಶಾಂತಿಯ ಮಾರ್ಗವನ್ನು ಆಯ್ಕೆ ಮಾಡಬೇಕುಎಂದು ಹೇಳಿದರು.

## ಏಪ್ರಿಲ್ 13ರಿಂದ 15ರವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧ: ಪ್ರಭಾರಿ ಜಿಲ್ಲಾಧಿಕಾರಿ ಈಶ್ವರ ಕುಮಾರ ಕಾಂದೂ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಲ್ಲಿ ಏಪ್ರಿಲ್ 14ರಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಆ ದಿನದಂದು ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುನ್ನೆಚರಿಕೆ ಕ್ರಮವಾಗಿ ದಿನಾಂಕ:13-04-2026 ರಾತ್ರಿ 11 ಗಂಟೆಯಿಂದ ದಿನಾಂಕ:15-04-2026ರ ಬೆಳಿಗ್ಗೆ 06ಗಂಟೆಯವರೆಗೆ ರಾಯಚೂರು ಜಿಲ್ಲೆಯಾದ್ಯಂತ ಮದ್ಯ ಮಾರಾಟ ಅಥವಾ ಸಾಗಾಣಿಕೆಯನ್ನು ನಿಷೇಧಿಸಿ ಪ್ರಭಾರಿ ಜಿಲ್ಲಾಧಿಕಾ-ರಿಗಳಾದ ಈಶ್ವರ ಕುಮಾರ ಕಾಂದೂ ಅವರು ಆದೇಶ ಹೊರಡಿಸಿದ್ದಾರೆ.**



ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಮಧ್ಯ ತಯಾ-ರಿಕಾ ಘಟಕಗಳು, ಸಾಗಾಣಿಕೆ, ಸಂಗ್ರಹಣೆಯನ್ನು ಮತ್ತು ಮಾರಾಟ ಮಳಿಗೆಗಳನ್ನು ಬಂದ್ ಮಾಡುವ ಅವಶ್ಯಕತೆ ಇರುವುದರಿಂದ ಈ ದಿನಗಳಂದು ಶುಷ್ಕ ದಿನಗಳನ್ನಾಗಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

# ಜಿಲ್ಲಾಡಳಿತದಿಂದ ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಂಂ-ಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತತ್ಸವ ಕಾರ್ಯಕ್ರಮವನ್ನು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಏಪ್ರಿಲ್ 14ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.**

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ



ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಪ್ರಭಾರಿ ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಕುಪ್ಪಳ್ಳಿ ಮತ್ತು ಹಿರಿಯ ವಿದ್ವಾಂಸರಾದ ಡಾ.ಬಿ.ಎಂ.ಪುಟ್ಟಯ್ಯ ಅವರು ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತತ್ಸವ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಾ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ, ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ದ್ವಿತೀಯ ಸ್ಥಾನ ಪಡೆದ ದುರ್ಗಾಭವಾನಿಗೆ ತಹಸೀಲ್ದಾರರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಅಮೋಘ ಸಾಧನೆ ಮಾಡಿದ ದುರ್ಗಾಭವಾನಿ, ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ. ಅಲ್ಲದೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದ್ವಿತೀಯ ರ್ಯಾಂಕ್ ಮತ್ತು ರಾಜ್ಯ ಮಟ್ಟದಲ್ಲಿ ನಾಲ್ಕನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದಾಳೆ.**

ಅಮರಾವತಿ ಗ್ರಾಮದ ಬಸವರಾಜ ಅವರ ಪುತ್ರಿಯಾಗಿರುವ ದುರ್ಗಾಭವಾನಿ ಅವರ ಈ ಸಾಧನೆಗೆ ತಾಲೂಕು ಮಟ್ಟದಲ್ಲಿ ಮೆಚ್ಚುಗೆ ವ್ಯಕ್ತವಾಗಿದ್ದು, ಪ್ರತಿಭೆಗೆ ತಹಸೀಲ್ದಾರರು ಸನ್ಮಾನಿಸಿ ಅಭಿನಂದಿಸಿದರು. ವಿದ್ಯಾರ್ಥಿನಿಯ



ಶ್ರಮ, ಕುಟುಂಬದ ಬೆಂಬಲ ಹಾಗೂ ಶಿಕ್ಷಕರ ಮಾರ್ಗದರ್ಶನವೇ ಈ ಸಾಧನೆಗೆ ಕಾರಣವೆಂದು ತಿಳಿದುಬಂದಿದೆ. ತಹಸೀಲ್ದಾರರು, ಶಿಕ್ಷಕರು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದು, ವಿದ್ಯಾರ್ಥಿನಿಗೆ ಶುಭಾಶಯಗಳನ್ನು ತಿಳಿಸಿದರು.

## ಗಾಂಜಾ ಗಿಡಗಳನ್ನು ಪತ್ತೆಹಚ್ಚಿ ವಶಕ್ಕೆ ಪಡೆದ ಅಬಕಾರಿ

**ಚಿರಾಯು ಜ್ಞಾನಿ ಸುದ್ದಿ ಜಾಲ ಕೆಂಭಾವಿ:** ದಿನಾಂಕ 08-04-2026 ರಂದು ಅಪರ ಆಯುಕ್ತರು (ಜಾರಿ ಮತ್ತು ಅಪರಾಧ, ಕೇಂದ್ರ ಸ್ಥಾನ ಬೆಳಗಾವಿ) ಹಾಗೂ ಅಬಕಾರಿ ಜಂಟಿ ಆಯುಕ್ತರು (ಜಾ&ತ, ಕಲಬುರಗಿ ವಿಭಾಗ, ಕಲಬುರಗಿ) ರವರ ನಿರ್ದೇಶನದಂತೆ ಮತ್ತು ಅಬಕಾರಿ ಉಪ ಆಯುಕ್ತರು (ಯಾದಗಿರಿ ಜಿಲ್ಲೆ) ರವರ ಆದೇಶದ ಮೇರೆಗೆ;

ಹರ್ಷರಾಜ್ ಬಿ, ಅಬಕಾರಿ ಉಪ ಅಧೀಕ್ಷಕರು (ಶಹಾಪೂರ ಉಪ ವಿಭಾಗ) ರವರ ನೇತೃತ್ವದಲ್ಲಿ ಯಶಸ್ವಿ ದಾಳಿ ನಡೆಸಲಾಯಿತು. ಸುರಪುರ ತಾಲೂಕಿನ ಕೆಂಭಾವಿ ಸೀಮೆ ವ್ಯಾಪ್ತಿಯ ಪರಸನಹಳ್ಳಿ ಗ್ರಾಮದ ನಿವಾಸಿ ಬಸವರಾಜ ತಂದೆ ಭೀಮಣ್ಣ ಬೆಳ್ಳಿ (ಸಾ: ನಗನೂರು) ಎಂಬುವವರಿಗೆ ಸೇ-ರಿದ ಸರ್ವೆ ನಂ. 296ರ ಜಮೀನಿನ ಮೇಲೆ ದಾಳಿ ಮಾಡಿದಾಗ, ಅಕ್ರಮ ಮಾರಾಟದ ಉದ್ದೇಶದಿಂದ ಬೆಳೆಸಲಾಗಿದ್ದ ಸುಮಾರು 4 ಕೆಜಿ 900 ಗ್ರಾಂ ತೂಕದ, ಹೂ ಮತ್ತು



ತೆನೆಗಳಿಂದ ಕೂಡಿದ ಒಟ್ಟು 30 ಹಸಿ ಗಾಂಜಾ ಗಿಡಗಳನ್ನು ಪತ್ತೆಹಚ್ಚಿ ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಆರೋಪಿಯ ವಿರುದ್ಧ ಎನ್.ಡಿ.ಪಿ.ಎಸ್ (NDPS) ಕಾಯ್ದೆ-1985 ರ ಅಡಿಯಲ್ಲಿ ಪ್ರಕರಣ ದಾಖಲಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ದಾಳಿ ತಂಡದಲ್ಲಿ ಭಾಗವಹಿಸಿದವರು: ವಸಂತಕುಮಾರ್ ಮತ್ತು ಅನಿಲಕುಮಾರ (ಅಬಕಾರಿ ಉಪನಿ-ರೀಕ್ಷಕರು, ಸುರಪುರ ವಲಯ). ಸಿಬ್ಬಂದಿಗಳಾದ ಯಮನಪ್ಪ, ಸಂಪತಕುಮಾರ, ಸಂದೀಪ್, ರಮೇಶ ಹಾಗೂ ಗೃಹ ರಕ್ಷಕ ದಳದ ಸಿಬ್ಬಂದಿಗಳು. ಸದರಿ ಪ್ರಕರಣವನ್ನು ಸುರಪುರ ವಲಯದ ಅಬಕಾರಿ ನಿರೀಕ್ಷಕ ಕೇದಾರನಾಥ ಎಸ್.ಟಿ ರವರು ದಾಖಲಿಸಿಕೊಂಡಿರುತ್ತಾರೆ.

# ಕಾರುಣ್ಯಾಶ್ರಮದ ಡಾ.ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರ ಜನ್ಮ ದಿನದ ಅಂಗವಾಗಿ ವಿಶೇಷ ಪೂಜೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಅವರ ಜನ್ಮದಿನದ ಅಂಗವಾಗಿ ಸಿಂಧನೂರು ತಾಲೂಕಿನ ಹರೇಟನೂರು ಗ್ರಾಮದ ಪ್ರಸಿದ್ಧ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಗೆ ವಿಶೇಷ ಪೂಜೆ ಪ್ರಾರ್ಥಿಸಿ ಕೊಳ್ಳಲಾಯಿತು.**

ನಂತರ ದೇವಸ್ಥಾನದ ಪ್ರಧಾನ ಅರ್ಚಕರು ಹಾಗೂ ಸಿಂಧನೂರಿನ ಕಾರುಣ್ಯ



ಆಶ್ರಮದ ಸಂಸ್ಥಾಪಕರಾದ ವೇ.ಮೂ.ಅಮರಯ್ಯ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಸಂಸ್ಥೆಯ ಸದಸ್ಯರಾದ ಮಲ್ಲಿಕಾರ್ಜುನ ಸ್ವಾಮಿಯವರು ಅಂಗವಿಕಲರಾದರು ಸಹ ಅನೇಕ ಜನಪರ ಸಮಾಜಪರ ಕಾರ್ಯಗಳನ್ನು ಮಾಡುತ್ತಾನೊಂದವ-ರಿಗೆ ಬಡವರಿಗೆ ತಮ್ಮ ಕೈಯಿಂದಾದಂತಹ ಸಹಾಯ ಸಹಕಾರ ಮಾಡುತ್ತಾ ಮಾನವೀಯತೆಯನ್ನು ಮೆರೆಯುತ್ತಿದ್ದಾರೆ. ದೇವರು ಮನುಷ್ಯರಿಗೆ ಎಲ್ಲವನ್ನು ಕೊಟ್ಟರೂ ಸಹ ದೇಹದ ತುಂಬಾ ಮದ ಮತ್ಸರ ಅಹಂಕಾರ ತುಂಬಿಕೊಂಡಿರುವವರೇ ನಿಜವಾದ ಅಂಗವಿಕಲರು ಎನ್ನುವ ಭಾವನೆ ನನ್ನದು. ಆದರೆ ನಮ್ಮ ಮಲ್ಲಿಕಾರ್ಜುನ ಅವರು ತಾವು ತಮ್ಮನ್ನು ಸಮಾಜಕ್ಕೆ ಅರ್ಪಿಸಿಕೊಂಡಿರುವುದು ಸಮಾಜಕ್ಕೆ ಮಾದರಿಯಾಗಿದೆ.

ಇಂತಹ ನಮ್ಮ ಕಾರುಣ್ಯ ಕುಟುಂಬದ ಕಾರುಣ್ಯ ಮೂರ್ತಿಗಳ ಜನ್ಮದಿನಕ್ಕೆ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಮತ್ತು ಸಕಲ ದೇವಾನುದೇವತೆಗಳ ಆಶೀರ್ವಾದ ಸದಾವಕಾಲವಿರಲಿ ಅವರ ಹೆತ್ತವರ ಕನಸಿನಂತೆ ಸಮಾಜದ ಮಗನಾಗಿರುವ ಮಲ್ಲಿಕಾರ್ಜುನ ಅವರು ಇನ್ನು ಎತ್ತರಕ್ಕೆ ಬೆಳೆಯಲಿ ಎನ್ನುವುದು ಕಾರುಣ್ಯ ಕುಟುಂಬದ ಮೂಲ ಆಶಯವಾಗಿದೆ ಎಂದು ಮಾತನಾಡಿ ಟ್ರಸ್ಟ್ ನ ಸದಸ್ಯರೊಂದಿಗೆ ಮತ್ತು ಹರೇಟನೂರು ಗ್ರಾಮದ ಸಾರ್ವಜನಿಕರೊಂದಿಗೆ ಮಲ್ಲಿಕಾರ್ಜುನ ಸ್ವಾಮಿಯ ಬಗ್ಗೆ ಜನ್ಮದಿನದ ಶುಭಾಶಯಗಳು ಕೋರಿ ತಮ್ಮ ಅಂತರಾಳದ ಅನಿಸಿಕೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ವೇ. ಮೂ. ಅಮರಯ್ಯ ಸ್ವಾಮಿ ಹಿರೇಮಠ ಸಂಸ್ಥಾಪಕರು ಕಾರುಣ್ಯ ಆಶ್ರಮ ಸಿಂಧನೂರು.ನಾಗನಗೌಡ ಮೇಟಿ ಗೌಡ್ರು ಹರೇಟನೂರು. ಪಶುಪತಿಗೌಡ ಕೆಸರಕೋಣೆ ಹರೇಟನೂರು. ಅಯ್ಯಪ್ಪ ಹರೇಟನೂರು. ಬಸವ ಸ್ವಾಮಿ ಹರೇಟನೂರು. ಮತ್ತು ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ನಡತೆ

ಒಳ್ಳೆಯ ನಡತೆ ಒಳ್ಳೆಯ ಗುಣ,
ಅದು ಮಾನವನಿಗೆ ದೊಡ್ಡ ಧನ.
ನಗುಮುಖದಿಂದ ಮಾತಾಡಿದರೆ,
ಎಲ್ಲರ ಮನವೂ ಗೆಲ್ಲಬಹುದು ಸುಲಭವಾಗಿ.

ಸುಳ್ಳು ಮಾತು ಬಿಡಿ ಸದಾ ಸತ್ಯ ಹೇಳು,
ಪರರ ನೋವನ್ನು ಕಂಡು ಸಹಾಯ ಮಾಡು.
ಸ್ವಚ್ಛ ಮನಸ್ಸು, ಸದುದ್ದೇಶ ಇರಲಿ,
ಜೀವನದ ದಾರಿ ಬೆಳಗುತ್ತಿರಲಿ.

ಹಿರಿಯರ ಮಾತು ಕೇಳಿ ನಡೆಯು,
ಶಿಕ್ಷಕರಿಗೆ ಸದಾ ಗೌರವ ಕೊಡು.
ಶಿಸ್ತು, ಪ್ರೀತಿ, ಸಹನೆ ಜೊತೆಯಾದರೆ,
ಜೀವನ ಯಶಸ್ಸಿನ ಹಾದಿ ಸೇರುವುದು ನಿಜವೇ.

**ಅಮರೇಶ್**

# ಯೂರಿಯಾ ರಸಗೊಬ್ಬರ ಖರೀದಿಗೆ FID ಸಂಖ್ಯೆ ಕಡ್ಡಾಯ ಕೃಷಿ ಅಧಿಕಾರಿ ಆಂಜನೇಯ ರಾಥೋಡ್ ಮನವಿ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ಗ್ರಾಮ ಪಂಚಾಯತ್ ಆವರಣ ಗ್ರಾಮದಲ್ಲಿ ರೈತರು ಯೂರಿಯಾ ರಸಗೊಬ್ಬರ ಖರೀದಿಸಲು ಇನ್ನುಮುಂದೆ ಈಐಡಿ (Farmer ID) ಸಂಖ್ಯೆ ಕಡ್ಡಾಯವಾಗಿದೆ ಎಂದು ಕೃಷಿ ಅಧಿಕಾರಿ ಆಂಜನೇಯ ರಾಥೋಡ್ ತಿಳಿಸಿದ್ದಾರೆ.**

ನೈಜ್ಯ ದಸೆ ಕನ್ನಡ ದಿನಪತ್ರಿಕೆ ಮೂಲಕ ಮಾತನಾಡಿದ ಅವರು, ಮುಂಗಾರು ಹಂಗಾಮಿನಿಂದ ರೈತರು ಯೂರಿಯಾ ರಸಗೊಬ್ಬರವನ್ನು ಕೃಷಿ ಇಲಾಖೆಯ "ಕೆ-ಕಿಸಾನ್" ತಂತ್ರಾಂಶದ ಮೂಲಕವೇ ಖರೀದಿ ಮಾಡಬೇಕಾಗಿದೆ ಎಂದು ಹೇಳಿದರು. ಹೊಸ ನಿಯಮಗಳ ಮುಖ್ಯ ಅಂಶಗಳು: ರೈತರ FID ಸಂಖ್ಯೆ ಮತ್ತು ಆಧಾರ್ ಕಾರ್ಡ್ ಕಡ್ಡಾಯ ರೈತನ ಜಮೀನಿನ ವಿಸ್ತೀರ್ಣ ಹಾಗೂ



ಬೆಳೆ ಆಧಾರವಾಗಿ ರಸಗೊಬ್ಬರ ವಿತರಣೆ ಅಗತ್ಯವಿರುವಷ್ಟೇ ಯೂರಿಯಾ ನೀಡಲಾಗುತ್ತದೆ. ರಸಗೊಬ್ಬರ ಮಾರಾಟಗಾರರು ಕೂಡ "ಕೆ-ಕಿಸಾನ್" ತಂತ್ರಾಂಶದ ಮೂಲಕವೇ ವಿತರಣೆ ಮಾಡಬೇಕು.


FID ಇಲ್ಲದ ರೈತರಿಗೆ ಸೂಚನೆ: ಈಐಡಿ ಸಂಖ್ಯೆ ಇಲ್ಲದ ರೈತರು ತಕ್ಷಣವೇ ಕೆಳಗಿನ ದಾಖಲೆಗಳೊಂದಿಗೆ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳಬೇಕು: ಪಹಣಿ ಬ್ಯಾಂಕ್ ಪಾಸ್‌ಬುಕ್ ಆಧಾರ್ ಕಾರ್ಡ್ ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರಹಿಮಾನ್ ಮಾತನಾಡಿ, ರೈತರು ಸಾವಯವ ಕೃಷಿಯತ್ತ ಹೆಚ್ಚು ಗಮನ ಹರಿಸಬೇಕು ಹಾಗೂ ಕೂಡಲೇ ಈಐಡಿ ನೋಂದಣಿ ಮಾಡಿಕೊಂಡು ರಸಗೊಬ್ಬರ ಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕೃಷಿ ಅಧಿಕಾರಿ ಆಂಜನೇಯ ರಾಥೋಡ್, ಸಂಜೀವಿನಿ ತಾಂತ್ರಿಕ ಸಿಬ್ಬಂದಿ ಸಂತೋಷ್, ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರಹಿಮಾನ್, ಬಸವರಾಜ ರಾಂಪಾಳಿ (ಪ್ರಾಥ-'ಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು), ಶಂಶುದ್ದೀನ್ (ಇಂಜಿನಿಯರ್), ಮುದ್ರಂಗಪ್ಪ (ಗ್ರಾಮ ಪಂಚಾಯತ್ ಕರ ವಸೂಲಿಗಾರ), ರೈತರಾದ ನಾಗಪ್ಪ, ತಿಪ್ಪಣ್ಣ ಮಕಾಶಿ ಸೇರಿದಂತೆ ಹಲವರು ಹಾಜರಿದ್ದರು.

## ಕರುಣೆಯ ಹೃದಯ ಶ್ರೀಮಂತಿಕೆ ಹೊಂದಿದವರು ನಮ್ಮ ಮಲ್ಲಿಕಾರ್ಜುನ ಸ್ವಾಮಿಯವರು ತೊಂಟದಾರ್ಯ ಮಹಾಸ್ವಾಮಿಗಳು

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಅವರ 37ನೇ ವರ್ಷದ ಜನ್ಮದಿನದ ಪ್ರಯುಕ್ತ ಲಿಂಗಸೂಗೂರು ತಾಲೂಕಿನ ದೇವರಭೂಪೂರು ಅಮರೇಶ್ವರ ಗುರು ಷ.ಬ್ರ. ಅಭಿನವ ಗಜದಂಡ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತ ಮಠದ ಮಹಾಲಿಂಗ ಮಹಾಸ್ವಾಮಿಗಳು ಮತ್ತು ಅಡವಿ ಅಮರೇಶ್ವರ ಸುಕ್ಷೇತ್ರದ ಪೀಠಾಧಿಪತಿಗಳಾದ ಮ.ನಿ.ಪ್ರ.ಸ್ವ. ತುಂಟದಾರ್ಯ ಮಹಾಸ್ವಾಮಿಗಳು ಶುಭಾಶೀರ್ವಾದದೊಂದಿಗೆ ಆಶೀರ್ವದಿಸಿದರು.**



ಈ ಸಮಯದಲ್ಲಿ ಅಡವಿ ಅಮರೇಶ್ವರ ಸುಕ್ಷೇತ್ರದ ತೊಂಟದಾರ್ಯ ಮಹಾಸ್ವಾಮಿಗಳು ನಮ್ಮ ಕರಡಕಲ್ ಹಿರೇಮಠದ ಮಲ್ಲಿಕಾರ್ಜುನ ಸ್ವಾಮಿ ಅವರು ಹುಟ್ಟು ಅಂಗವಿಕಲರಾಗಿ ಅವರ ಹೆತ್ತವರ ಆದರ್ಶ ಆಶಯದಂತೆ ಹಲವಾರು ಸಮಾಜ ಪರ ಕಾರ್ಯಗಳನ್ನು ಮಾಡುತ್ತಾ ನಾಡಿನ ಬಸವಾದಿ ಶರಣರ ಪ್ರೀತಿಗೆ ಪಾತ್ರರಾಗಿದ್ದಾರೆ. ಮತ್ತು ಸಿಂಧನೂರಿನಲ್ಲಿ ಕರುಣೆಯ ಕಾರುಣ್ಯ ಕುಟುಂಬವನ್ನು ಹುಟ್ಟು ಹಾಕುವ ಮೂಲಕ ಅನೇಕ ಅಂತ ಅನಾಥರ ಬಾಳಿಗೆ ಬದುಕು ಕಟ್ಟಿ ಕೊಟ್ಟಿರುವ ಇವರ ಸೇವೆ ಶ್ಲಾಘನೀಯವಾದುದು ದೈಹಿಕವಾಗಿ ನ್ಯೂನತೆ ಹೊಂದಿದ ಮಲ್ಲಿಕಾರ್ಜುನ ಸ್ವಾಮಿಯವರ ಸೇವೆಗೆ ನಮ್ಮ ಅಡವಿ ಅಮರೇಶ್ವರ ಕ್ಷೇತ್ರದ ಗುರುಗಳ ನಮ್ಮೆಲ್ಲರ ಆಶೀರ್ವಾದವಿರುತ್ತದೆ. ನಿಮ್ಮ ಕಾರುಣ್ಯ ಕುಟುಂಬದ ಸೇವೆ ಅನಾಥರ ಬಾಳಿನ ಬೆಳಕಾಗಿ ನಮ್ಮ ದೇಶದ ಅನಾಥ ಸಂಸ್ಕೃತಿಯನ್ನು ಅಳಿಸಿ ಹಾಕುವಲ್ಲಿ ತಮ್ಮ ಸೇವೆ ಅಮೋಘವಾಗಲಿ ಎನ್ನುವುದು ನಮ್ಮ ಹಾಗೂ ನಮ್ಮ ಭಕ್ತರ ಆಶಯವಾಗಿದೆ ಎಂದು ಆಶೀರ್ವಚನ ನೀಡಿ ಡಾ. ಮಲ್ಲಿಕಾರ್ಜುನ ಸ್ವಾಮಿಯವರಿಗೆ ನೆನಪಿನ ಕಾಣಿಕೆಯನ್ನು ವಿತರಿಸಿ ಆಶೀರ್ವದಿಸಿದರು. ನಂತರ ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತ ಮಠದ ಮಹಾಲಿಂಗ ಮಹಾಸ್ವಾಮಿಗಳು ಅಡವಿ ಅಮರೇಶ್ವರ ಕ್ಷೇತ್ರದ ಎರಡೂವರೆ ಟನ್ ತೂಕದ ಕಲ್ಲನ್ನು ಎತ್ತುಗಳು ಎಳೆಯುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ನಾಡಿನ ಸಮಸ್ತ ರೈತರುಗಳ ಆಶೀರ್ವಾದದೊಂದಿಗೆ ಸರಳ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಕಾರುಣ್ಯ ಆಶ್ರಮದ ಕರುಣೆಯ ಕಂದನಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರಿಗೆ ಬಸವಾದಿ ಶರಣರು ಒಳಬಳ್ಳಾರಿಯ ಲಿಂಗೈಕ್ಯ ಚನ್ನಬಸವ ಮಹಾಶಿವಯೋಗಿಗಳ ಆಶೀರ್ವಾದ ಸದಾವಕಾಲವಿರುತ್ತದೆ ಎಂದು ಆಶೀರ್ವದಿಸಿದರು. ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಬಸವರಾಜ ಬೆಲ್ಲದ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಗುಂಜಳ್ಳಿ. ವೆಂಕೋಬ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಗಾಂಧಿನಗರ. ಆಶ್ರಮದ ಸಲಹಾ ಸಮಿತಿಯ ಹಿರಿಯರುಗಳಾದ ಮಂಜುನಾಥ ಕರಡಕಲ್. ಶರಣಪ್ಪ ನಾಯಕ ಕಸಬಾ ಲಿಂಗಸುಗೂರು. ಮಹೇಶ ಕಸಬಾ ಲಿಂಗಸೂಗೂರು. ಶ್ರೀಮಠ ಸೇವಾ ಟ್ರಸ್ಟ್ ಸದಸ್ಯರಾದ ಸುಜಾತ ಹಿರೇಮಠ. ಪತ್ರಕರ್ತರಾದ ನಾಗರಾಜ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲ್ಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ..ಜ್ಯೋತಿ. ಮೀನಾಕ್ಷಮ್ಮ. ಲಕ್ಷ್ಮಿ. ಶರಣು ಸ್ವಾಮಿ ಅನೇಕರು ಉಪಸ್ಥಿತರಿದ್ದರು.

# ಕಾ.ನಿ.ಪ.ಸಂಘದ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಪತ್ರಕರ್ತ ಪಿ.ಪರಮೇಶರವರಿಗೆ ತಾಲೂಕು ಘಟಕದಿಂದ ಅಧಿಕೃತ ಆಹ್ವಾನ



**ನೈಜ್ಯ ದೆಸೆ ನ್ಯೂಸ್**

ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದಿಂದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಪತ್ರಕರ್ತ ಪಿ.ಪರಮೇಶ ರವರನ್ನು ಅಧಿಕೃತವಾಗಿ ತಾಲೂಕು ಘಟಕದಿಂದ ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯುವ ಸಮ್ಮೇಳನದಲ್ಲಿ ರಾಜ್ಯಮಟ್ಟದ ಪ್ರಶಸ್ತಿಯನ್ನು ಸ್ವೀಕರಿಸುವಂತೆ ಕಾ.ನಿ.ಪ.ಸಂಘದ ತಾ.ಅಧ್ಯಕ್ಷರಾದ ಆಶೋಕ ತಡಕಲ್ ಸನ್ಮಾನಿಸಿ ಆಹ್ವಾನಿಸಿ ಮಾತನಾಡಿ ಪ್ರತಿ ವರ್ಷದಂತೆ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದಿಂದ ಬೀದರ್‌ನಲ್ಲಿ ನಡೆಯಲ್ಲಿದು ಇಂತಹ ಕಾರ್ಯಕ್ರಮದಲ್ಲಿ ಮಾನ್ವಿ ತಾಲೂಕಿನ ಹಿರಿಯ ಸುದ್ದಿಮೂಲ ಪತ್ರಿಕೆಯ ವರದಿಗಾರರಾದ ಪಿ.ಪರಮೇಶರವರಿಗೆ ರಾಜ್ಯ ಘಟಕದಿಂದ ಅರಣ್ಯ ವಿಭಾಗದಲ್ಲಿ ಅತ್ಯುತ್ತಮ ವರದಿಗಾಗಿ ನೀಡುವ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕೋರಿದರು.

ಜಿಲ್ಲಾ ಘಟಕದ ಬಸವರಾಜ ಭೋಗವತಿ,ಶರಣಬಸವ ನೀರಮಾನ್ವಿ, ತಾಯಪ್ಪ ಬಿ.ಹೊಸುರು.ತಾಲೂಕು ಘಟಕದ ಕಾರ್ಯದರ್ಶಿ ರವಿ ಅಲ್ದಾಳ್, ಸಿದ್ದಾರಾಮಯ್ಯಸ್ವಾಮಿ, ಈಶಪ್ಪ ಬೈಲಮಾರ್ಚಡ್, ಬಸವ ತಡಕಲ್, ನಾಗರಾಜ, ಗೋವಿಂದ,ಬಸವರಾಜ ಕನ್ನಾರಿ, ಕಿರಣ್ ಕುಮಾರ , ಶಂಕರಪ್ಪ, ಶಿವಕುಮಾರ ಜಗ್ಲಿ, ಗಯಾಸ್, ರಾಮಾಂಜನೇಯ್ಯ,ನವೀನ್ ಕುಮಾರ, ಆನಂದಸ್ವಾಮಿ, ರಾಜಶೇಖರ, ರಾಜಶೇಖರ ಸ್ವಾಮಿ,ಮಹಾಂತೇಶ, ಸೇ–

# ಎಲ್.ಬಿ.ಕೆ ಪದವಿ ಪೂರ್ವ ಕಾಲೇಜಿಗೆ ವಾಣಿಜ್ಯ ವಿಭಾಗಕ್ಕೆ ಗೌರಮ್ಮ ,ಕಲಾ ವಿಭಾಗಕ್ಕೆ ಬಸಮ್ಮ ಟಾಪರ್

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ಎಲ್ ಬಿ ಕೆ ಪದವಿ ಪೂರ್ವ ಕಾಲೇಜಿನ 2025– 26 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಕಾಲೇಜಿಗೆ ವಾಣಿಜ್ಯ ವಿಭಾಗದಲ್ಲಿ 600 ಕ್ಕೆ 576 ಅಂಕ ಪಡೆದು ಪ್ರತಿಶತ 96ರಷ್ಟು ಅಂಕದೊಂದಿಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ ಈ ವಿದ್ಯಾರ್ಥಿನಿ ಕನ್ನಡದಲ್ಲಿ 100 ಕ್ಕೆ 100 ಅಂಕ ಪಡೆದಿದ್ದಾಳೆ.**

ದ್ವಿತೀಯ ಸ್ಥಾನ ದೇವರಾಜ ಬಂಗಾರಿ ಕ್ಯಾಂಪ 566. ಅಂಕ ಪಡೆದಿದ್ದಾನೆ,ತೃತೀಯ ಸ್ಥಾನ. 559 ಅಂಕ ಪಡೆದಿದ್ದಾರೆ ಕಲಾವಿಭಾಗದಲ್ಲಿ ಬಸಮ್ಮ ಶೇಷಪ್ಪ ಇರಬಗೇರಾ



ಗೌರಮ್ಮ ಮ್ಯಾದರಾಳ ತಾಂಡ 600/576 96%



ಬಸಮ್ಮ ಶೇಷಪ್ಪ ಇರಬಗೇರಾ 571–95.16

600 ಕ್ಕೆ 571 ಅಂಕ ಪಡೆದು ಕನ್ನಡ 100 ಕ್ಕೆ 100 – ಅಥ–'ರ್ಥಶಾಸ್ತ್ರದಲ್ಲಿ 100 ಕ್ಕೆ 100 ಪಡೆದು ಪ್ರತಿಶತ 95 .16 ರಷ್ಟು ಅಂಕ ಪಡೆದು ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ ದ್ವಿತೀಯ ಸ್ಥಾನ ಅಂಬಿಕಾ ಜಿನೂರು 561, ತೃತೀಯ ಸ್ಥಾನ ಅರುಣಕುಮಾರ 560 ಅಂಕ ಪಡೆದಿದ್ದಾನೆ ಈ ವಿದ್ಯಾರ್ಥಿಗಳಿಗೆ ಕಾಲೇಜಿನ ಸಂಸ್ಥೆಯ ಅಧ್ಯಕ್ಷರಾದ ಶರಣಪ್ಪ ತೆಂಗಿನಕಾಯಿ ಮತ್ತು ನೊಬೆಲ್ ಪದವಿ ವಿದ್ಯಾಲಯದ ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ ಉಪಾಧ್ಯಕ್ಷರಾದ ಶಂಕರ್ ಪತ್ತಾರ್ ಕಾರ್ಯದರ್ಶಿಯಾದ ಡಾ.ಅರುಣಕುಮಾರ ಬೇರ್ಗಿ ಖಜಾಂಚಿಗಳಾದ ಜಯಪ್ಪ ಗೊರೆಬಾಳ ಮತ್ತು ಕಾಲೇಜಿನ ಪ್ರಾಂಶುಪಾಲರಾದ.

ಶಿವಕುಮಾರ ಬಿಂಗಿ ಹಾಗೂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಐಶ್ವರ್ಯ ದಳವಾಯಿ ಹಾಗೂ ಸಂಸ್ಥೆಯ ಎಲ್ಲಾ ಉಪನ್ಯಾಸಕ ವರ್ಗ ಸಿಬ್ಬಂದಿತರ ವರ್ಗ ಅಭಿನಂದಿಸಿದ್ದಾರೆ ಮಾರ್ಚ್ ನಲ್ಲಿ ನಡೆದ ದ್ವಿತೀಯ ವಾರ್ಷಿಕ ಪರೀಕ್ಷೆಗೆ 240 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಇದರಲ್ಲಿ ಒಟ್ಟು 186 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಇದರಲ್ಲಿ 42 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರಥಮ 95 ದ್ವಿತೀಯ ಸ್ಥಾನ 35 ತೃತೀಯ ಸ್ಥಾನದಲ್ಲಿ15 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಭೂಗೋಳಶಾಸ್ತ್ರ ಮತ್ತು ಕಂಪ್ಯೂಟರ್ ಸೈನ್ಸ್ ನಲ್ಲಿ ಸತತ ಎರಡು ವರ್ಷ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ .ಒಟ್ಟು ಕಾಲೇಜಿನ ಫಲಿತಾಂಶ 77.5ರಷ್ಟು ಬಂದಿದೆ ಎಂದು ಪ್ರಾಂಶುಪಾಲರು ಹರ್ಷ ವ್ಯಕ್ತಪಡಿಸಿದರು.

# ಜಯಂತಿ ಪೂರ್ವಭಾವಿ ಸಭೆ ಶಂಕರಾಚಾರ್ಯ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಿ: ಎಡಿಸಿ ಶಿವಾನಂದ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು ಏಪ್ರಿಲ್ 10 (ಕರ್ನಾಟಕ ವಾರ್ತೆ): ದೇಶದಲ್ಲಿ ಸನಾತನ ಧರ್ಮದ ರಕ್ಷಣೆ ಮತ್ತು ತತ್ವ ಸಿದ್ಧಾಂತಗಳ ಪ್ರಚಾರಕ್ಕೆ ಹಗಲಿರುಳು ಶ್ರಮಿಸಿದ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಜಿಲ್ಲಾಡಳಿತದಿಂದ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ತಿಳಿಸಿದರು.**

ಏಪ್ರಿಲ್ 09ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಏಪ್ರಿಲ್ 21ರ ಸಂಜೆ 5ಗಂಟೆಗೆ ನಗರದ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.




ಅದಕ್ಕೂ ಮುಂಚೆ ನಗರದ ಸರಾಫ್ ಉದ್ಯಾನವನ, ಜವಾಹರ ನಗರ ಶಾಲೆ, ಎಸ್.ಬಿ.ಐ. ಮಂದಿರದಿಂದ ವಾಸವಿ ವೃತ್ತ, ಹನುಮಾನ ಟಾಕೀಸ್ ದ್ವಾರ, ನಗರೇಶ್ವರ ದೇವಸ್ಥಾನ, ಚೌಡಮ್ಮಕಟ್ಟೆಯ ಮಾರ್ಗವಾಗಿ ಶಂಕರ ಮಠದವರೆಗೆ ಮೆರವಣಿಗೆ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೆ ಪೊಲೀಸ್ ಬಂದೋಬಸ್ತ್, ಕಲಾ ತಂಡಗಳ ನೇಮಕ, ಉಪನ್ಯಾಸಕರು, ಆಮಂತ್ರಣ ಪತ್ರಿಕೆ, ವೇದಿಕೆ, ಧ್ವನಿ–ಬೆಳಕು, ಆಸನ, ಕುಡಿಯುವ ನೀರು, ಉಪಾಹಾರ, ವ್ಯವಸ್ಥೆಯನ್ನು ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಮನ್ವಯದಿಂದ ಮಾಡಬೇಕೆಂದು ಸಲಹೆ ನೀಡಿದರು. ಶ್ರೀ ಶಂಕರಾಚಾರ್ಯ ಜಯಂತಿಯನ್ನು ಎಲ್ಲ ಶಾಲಾ–ಕಾಲೇಜುಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಆಚರಣೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಅಪರ ಜಿಲ್ಲಾಧಿಕಾ–ರಿಗಳು ಸಭೆಯಲ್ಲಿ ಮನವಿ ಮಾಡಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ, ಸಮಾಜದ ಮುಖಂಡರಾದ ಸಿ.ವಸಂತ ರಾವ್, ಕೃಷ್ಣಮೂರ್ತಿ ಹೆಬಸೂರು, ಹೆಚ್.ಹನುಮಂತ, ಶಿವಪ್ರಸಾದ್, ರಮೇಶ ಕುಮಾರ್, ಚಂದ್ರಶೇಖರ ವಿದ್ಯಾ, ವಿಷ್ಣುವರ್ಧನ, ವಿನೋಧ ಸಾಗರ್, ಜಯ ಕುಮಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

# ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬಿಜೆಪಿ ಬೆಂಬಲಿತ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಗೋವಿಂದಪ್ಪ ಹಲಗೇರಿ (ಬಿಜೆಪಿ ಬೆಂಬಲಿತ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಖುರ್ಷಿದ್ ಪಟೇಲ್( ಬಿಜೆಪಿ ಬೆಂಬಲಿತ) ಮತದಾನದ ಮೂಲಕ ಆಯ್ಕೆಯಾಗಿದ್ದಾರೆ.**

ಈ ಚುನಾವಣೆಯಲ್ಲಿ ಒಟ್ಟು 13 ಮತಗಳು ಚಲಾಯಿಸಲ್ಪಟ್ಟಿದ್ದು, ಖುರ್ಷಿದ್ ಪಟೇಲ್ (ಬಿಜೆಪಿ ಬೆಂಬಲಿತ) 10 ಮತಗಳು ಶಿವರಾಜ್ ವಿಭೂತಿ (ಪಕ್ಷೇತರ) 3 ಮತಗಳು ಪಡೆದಿದ್ದಾರೆ. ಹತ್ತು ನಿರ್ದೇಶಕರು ಬಿಜೆಪಿ ಬೆಂಬಲಿತರಾಗಿದ್ದು,



ಉಳಿದ ಇಬ್ಬರು ಬೇರೆ ಪಕ್ಷಗಳಿಗೆ ಸೇರಿದವರಾಗಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾದ ಚುನಾವಣಾ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಿತು. ಫಲಿತಾಂಶ ಪ್ರಕಟವಾದ ಬಳಿಕ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

**ಪ್ರತಿಕ್ರಿಯೆಗಳು:** ಈ ಸಂದರ್ಭದಲ್ಲಿ ಮಾತನಾಡಿದ ಚಂದಪ್ಪ ಬುದ್ದಿನ್ನಿ ಅವರು, ಬಿಜೆಪಿ ಪಕ್ಷವು ಪರಿಶಿಷ್ಟ ಪಂಗಡದ ಅಭ್ಯರ್ಥಿ ಗೋವಿಂದಪ್ಪ ಹಲಗೇರಿ ಹಾಗೂ ಅಲ್ಪಸಂಖ್ಯಾತ ಸಮುದಾಯದ ಖುರ್ಷಿದ್ ಪಟೇಲ್ ಅವ–



ರಿಗೆ ಸ್ಥಾನ ನೀಡುವ ಮೂಲಕ ಸಾಮಾಜಿ–ಕ ನ್ಯಾಯ ಸಾಧಿಸಿದೆ ಎಂದು ಹೇಳಿದರು. ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್ ಖುರೇಷಿ ಅವರು ಕೂಡ ಮಾತನಾಡಿ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ–ರಿಗೆ ಅವಕಾಶ ನೀಡಿರುವುದು ಬಿಜೆಪಿ ಪಕ್ಷದ ಸಾಮಾಜಿಕ ಬದ್ಧತೆಯ ಉದಾಹರಣೆ ಎಂದರು. ಉಪಾಧ್ಯಕ್ಷರಾಗಿ ಆಯ್ಕೆಯಾದ ಖುರ್ಷಿದ್ ಪಟೇಲ್ ಬಿಜೆಪಿ ಬೆಂಬಲಿತ ಅವರು, ತಮ್ಮನ್ನು ಬೆಂಬಲಿಸಿದ ಎಲ್ಲಾ ಬಿಜೆಪಿ ಮುಖಂಡರು ಹಾಗೂ ರೈತರಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

**ಈ ಸಂದರ್ಭದಲ್ಲಿ ಹಾಜರಿದ್ದವರು:** ರಾಮನಗೌಡ ಕರಡಿಗುಡ್ಡ, ಅಮರೇಶ್ ಪಾಟೀಲ್, ವೀರಣ್ಣ ಬಳೆ ಸೌಕಾರ್, ಶಿವು ಪಾಣಿ ಸೌಕಾರ್, ಚಂದಪ್ಪ ಬುದ್ದಿನ್ನಿ, ರಮೇಶ್ ಆನ್ವರಿ, ಶಂಕರ್ ಗೌಡ ಮಾಲಿ ಪಾಟೀಲ್, ಸಿದ್ದಯ್ಯ ತಾತ, ವೆಂಕುಬ ತೋಟದ, ರಂಗಪ್ಪ ಬಂಡಿ, ಮಾಳಪ್ಪ ಪೂಜಾರಿ, ವಿನೋದ್ ಚಿಕ್ಕಲ, ಮೌನೇಶ್ ನಾಯಕ್, ದುರ್ಗಪ್ಪ, ಶರಣು ಗಂಗಪ್ಪ ತಗ್ಗಳ್ಳಿ, ಗೋವಿಂದಪ್ಪ ಬಂಡಿ, ಸುರೇಶ್ ಪೂಜಾರಿ, ಭೀಮಣ್ಣ ಹಂಜಾಳ, ಎಂ–ಎಸ್ ಪಾಟೀಲ್, ಮುದುರಂಗಪ್ಪ ವಠಾರ, ಬುಡ್ಡಪ್ಪ ಕವಲಿ, ಅಂಬರೀಷ್ ಕವಲಿ, ಶಿವು ಗುಂಡಪ್ಪ, ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್, ರಮೇಶ್ ತೆಗ್ಗಳ್ಳಿ, ಉಪಾಧ್ಯಕ್ಷರಾದ ವೀರೇಶ ಅರಕೇರಿ ಹಾಗೂ ನೂತನ ನಿರ್ದೇಶಕರು, ಬಿಜೆಪಿ ಕಾರ್ಯಕರ್ತರು ಮತ್ತು ಊರಿನ ಮುಖಂಡರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಇಐಐ ನೇಮಕಾತಿ 2026–29 ಅಸೋಸಿಯೇಟ್ ಎಂಜಿನಿಯರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 10, 2026 ಶಶಿ ಇಐಐ ನೇಮಕಾತಿ 2026: 29 ಅಸೋಸಿಯೇಟ್ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್ ಏಪ್ರಿಲ್ 2026 ರ ಇಐಐ ಅಧಿಕೃತ ಅಧಿಸೂಚನೆಯ ಮೂಲಕ ಅಸೋಸಿಯೇಟ್ ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಎಟಾವಾ ಮಧ್ಯಪ್ರದೇಶ, ಭರೂಚ್, ದೇವಭೂಮಿ ದ್ವಾರಕಾ ಗುಜರಾತ್, ವಿಶಾಖಪಟ್ಟ–ಣಂ ಆಂಧ್ರಪ್ರದೇಶ, ರಾಯ್‌ಪುರ ಛತ್ತೀಸ್‌ಗಢ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 19–ಏಪ್ರಿಲ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19–ಏಪ್ರಿಲ್–2026 ಸಂದರ್ಶನವು ಏಪ್ರಿಲ್ 27, 28, 29 ಮತ್ತು 30, 2026 ರಂದು ನಡೆಯಲಿದೆ ಅಧಿಕೃತ ವೆಬ್‌ಸೈಟ್: engineersindia.com

## ಅರಕೇರಾ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿಗೆ ಶೇ 88.89

ನೈಜ್ಯ ದೆಸೆ ನ್ಯೂಸ್

**ಅರಕೇರಾ: 2026 ನೇ ಸಾಲಿನ ಕರ್ನಾಟಕ ದ್ವಿತಿಯ ಪಿಯುಸಿ ಪರೀಕ್ಷೆ –1ರ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ಅರಕೇರಾ ಪಟ್ಟಣದಲ್ಲಿನ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು 36 ತೇರ್ಗಡೆಯಾದ ವಿದ್ಯಾರ್ಥಿಗಳು 32 ಅನುತ್ತಿರ್ಣರಾದ ವಿದ್ಯಾರ್ಥಿಗಳು 4 ಒಟ್ಟಾರೆ ಡಿಸ್ಟಿಂಕ್ಷನ್ 8 ಪ್ರಥಮಶ್ರೇಣೆಯಲ್ಲಿ 18 ದ್ವಿತಿಯ ಶ್ರೇಣೆಯಲ್ಲಿ ಉತ್ತೀರ್ಣ 4 ತೃತೀಯ ಶ್ರೇಣೆಯಲ್ಲಿ 2ತೇರ್ಗಡೆಯಾಗಿದ್ದು ಅರಕೇರಾ ಪಟ್ಟಣದಲ್ಲಿನ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿಗೆ ಶೇ 88.8 ಫಲಿತಾಂಶ ಬಂದಿದೆ ಎಂದು ಪ್ರಾಚಾರ್ಯರಾದ ಬುದ್ದಿವಂತಿ ತಿಳಿಸಿದ್ದಾರೆ.**

ಕಾಲೇಜಿನಲ್ಲಿ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳು ಕುಮಾರಿ ಫೌಜೀಯಾ ಬೇಗಂ ತಂದೆ ಇಬ್ರಾಹಿಂಸಾಬ 600ಕ್ಕೆ 548 ಅಂಕಪಡೆದು ಶೇಕಡ 91.33 ಕಾಳೇಜಿಗೆ ಪ್ರಥ–ಮಸ್ಥಾನ ಪಡೆದುಕೊಂಡಿದ್ದಾಳೆ. ಕುಮಾರ ಎನ್ ಶರಣುಕುಮಾರ ತಂದೆ ಜಗದೀಶನಾಗೋಲಿ 600ಕ್ಕೆ 547 ಅಂಕಪಡೆದು ಶೇಕಡ 91,96 ದ್ವಿತೀಯ ಸ್ಥಾನ ಪಡೆದೆದಿರುತ್ತಾನೆ. ಕುಮಾರಿ ಪವಿತ್ರ ತಂದೆ ಬಸವಣ್ಣಯ್ಯಸ್ವಾಮಿ ನಾಗೋಲಿ 600ಕ್ಕೆ 532 ಅಂಕಪಡೆದು ಶೇಕಡ 88.66 ತೃತಿಯ ಸ್ಥಾನ ಪಡೆದಿರುತ್ತಾಳೆ.

ಕುಮಾರಿ ಬಿಸ್ಮಿಲ್ಲಾ ತಂದೆ ಸಣ್ಣಪೀರಸಾಬ 600ಕ್ಕೆ 527 ಅಂಕಪಡೆದು ಶೇಕಡಾ 87.83 ನಾಲ್ಕನೇ ಸ್ಥಾನ ಪಡೆದಿರುತ್ಥಾಳೆ. ದ್ವಿತಿಯ ಪಿಯುಸಿ 1ರ ಪರೀಕ್ಷೆಯ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತಮಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರಾದ ಬುದ್ದಿವಂತಿ ಮೇಡಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಲೇ–ಜಿಗೆ ಉತ್ತಮ ಫಲಿತಾಂಶ ಪಡೆದು ಪಟ್ಟಣಕ್ಕೆ ಮತ್ತು ಕಾಲೇಜಿಗೆ ಕೀರ್ತಿ ತಂದುಕೊಟ್ಟಿರುವ ವಿದ್ಯಾರ್ಥಿಗಳಿಗೆ ಪಟ್ಟಣದ ಮುಖಂಡರು ಮತ್ತು ಜನಪ್ರತಿನಿಧಿಗಳು ಶಿಕ್ಷಣಪ್ರೇಮಿಗಳು ಹಳೆಯ ವಿದ್ಯಾರ್ಥಿಗಳು ಕಾಲೇಜಿನ ಪ್ರಾಚಾರ್ಯರಿಗೂ ಉಪನ್ಯಾಸಕವರ್ಗದವರಿಗೂ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸಿದ್ದಾರೆ. ಕಾಲೇಜಿಗೆ ಅತಿ ಹೆಚ್ಚು ಅಂಕಪಡೆದ ವಿದ್ಯಾಥಿಗಳು 1 ಕುಮಾರಿ ಫೌಜೀಯಾ ಬೇಗಂ ತಂದೆ ಇಬ್ರಾಹಿಂಸಾಬ ಅರಕೇರಾ 2 ಕುಮಾರ ಎನ್ ಶರಣುಕುಮಾರ ತಂದೆ ಜಗದೀಶನಾಗೋಲಿ ಅರಕೇರಾ 3) ಕುಮಾರಿ ಪವಿತ್ರ ತಂದೆ ಬಸವಣ್ಣಯ್ಯಸ್ವಾಮಿ ನಾಗೋಲಿ



## ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗ ಅಪ್ಸನಾ ಪ್ರಥಮ, ಕಲಾ ವಿಭಾಗದಲ್ಲಿ ವಿಶೇಷ ಚೇತನ ವಿದ್ಯಾರ್ಥಿ ಸಂಜನಾ ಪ್ರಥಮ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಸರ್ಕಾರಿ ಪಧವಿ ಪೂರ್ವ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಪಟ್ಟಣದ ಅಪ್ಸನಾ ತಂದೆ ಮಹಿಬೂಬ್ ಸಾಬ್ ಈ ವಿದ್ಯಾರ್ಥಿನಿಯು 600 ಕ್ಕೆ 569 ಅಂಕ(ಶೇ94.83) ಪಡೆಯುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ, ಮಹಿಮೂದಾ ಬೇಗಂ 550 ಅಂಕ (ಶೇ.91.66) ಪಡೆದು ದ್ವಿತಿಯ ಸ್ಥಾನ, ಸುಮಂಗಲಾ 547 ಅಂಕ(ಶೇ.91.16) ಪಡೆದು ತೃತಿಯ ಸ್ಥಾನ ಪಡೆದಿದ್ದು ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಹಾಗೂ ಪಟ್ಟಣದ ಜನತೆ ಅಭಿನಂದಿಸಿದ್ದಾರೆ.**





ವಾಣಿಜ್ಯ ವಿಭಾಗದಲ್ಲಿ ಒಟ್ಟು 30 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 28 ವಿದ್ಯಾರ್ಥಿಗಳು ಪಾಸಾಗಿದ್ದಾರೆ ಒಟ್ಟು ವಾಣಿಜ್ಯ ವಿಭಾಗದ ಫಲಿತಾಂಶ ಶೇ93 ರಷ್ಟು ಬಂದತಾಗಿದೆ, ಕಲಾ ವಿಭಾಗದಲ್ಲಿ ವಿಶೇಷ ಚೇತನ ವಿದ್ಯಾರ್ಥಿನಿ ಸಂಜನಾ 500ಕ್ಕೆ 480ಅಂಕ ಪಡೆದು (ಶೇ96%) ಪ್ರಥಮ ಸ್ಥಾನ , ಸೋಮೇಶ್ವರಿ 600ಕ್ಕೆ 539 ಅಂಕ (ಶೇ89.83)ಪಡೆದು ದ್ವಿತಿಯ ಸ್ಥಾನ, ಮಹ್ಮದ್ ರಿಯಾನ್ 535 ಅಂಕ (ಶೇ.89.16) ಪಡೆದು ತೃತಿಯ ಸ್ಥಾನ ಪಡೆದಿದ್ದು ಒಟ್ಟು 88 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 50 ವಿದ್ಯಾರ್ಥಿಗಳು ಪಾಸಾಗುವ ಮುಲಕ ಕಾಲೇಜಿನ ಫಲಿತಾಂಶ ಶೇ56.8 ರಷ್ಟಾಗಿದೆ.

ಉಪನ್ಯಾಸಕರ ಕೊರತೆ: ಪಟ್ಟದ ಸರ್ಕಾರಿ ಕಾಲೇಜಿನ ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಉಪನ್ಯಾಸಕರ ಕೊರತೆ ಇರುವ ಕಾರಣ ಫಲಿತಾಂಶ ಕುಂಟಿಕೊಂಡಿದ್ದು ಮುಂದಿನ ದಿನಗಳಲ್ಲಿ ಉಪನ್ಯಾಸಕರನ್ನು ಭರ್ತಿ ಮಾಡುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯ ಉಜ್ವಲಕ್ಕಾಗಿ ಸರ್ಕಾರ ಮುಂದಾಗಬೇಕಿದೆ ಎಂದು ಬುದ್ದಿಜೀವಿಗಳ ಅಂಭೋಣವಾಗಿದೆ.

## ಬಸವ ಜಯಂತಿ ಪ್ರಯುಕ್ತ 'ಕವಿಗಳು ಕಂಡಂತೆ ಬಸವಣ್ಣ' ಕವಿಗೋಷ್ಠಿಗೆ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಬಸವ ಜಯಂತಿ ಉತ್ಸವ ಸಮಿತಿ ಹಾಗೂ ತಾಲೂಕ ಆಡಳಿತದ ಸಹಕಾರದೊಂದಿಗೆ ಇದೇ ತಿಂಗಳು 20 ರಂದು ನಗರದ ಆರ್.ಜಿ.ಎಮ್. ಶಾಲಾ ಮೈದಾನದಲ್ಲಿ ಜರುಗಲಿರುವ 893 ನೇ ಬಸವ ಜಯಂತಿ ಪ್ರಯುಕ್ತ ದಿನಾಂಕ: 16–4–2026 ರಂದು ಸಂಜೆ 4–00 ಗಂಟೆಗೆ 'ಕವಿಗಳು ಕಂಡಂತೆ ಬಸವಣ್ಣ' ಮುಕ್ತ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆಯೆಂದು ಬಸವ ಜಯಂತಿ ಉತ್ಸವ ಸಮಿತಿ ಸದಸ್ಯರು ಕವಿಗೋಷ್ಠಿಯ ಸಂಚಾಲಕರಾದ ಬೀರಪ್ಪ ಶಂಭೋಜಿ ತಿಳಿಸಿದ್ದಾರೆ.**



ಭಾಗವಹಿಸುವ ಕವಿಗಳು ಬಸವಣ್ಣನವರ ಕುರಿತು 25 ಸಾಲುಗಳಿಗೆ ಮೀರದಂತೆ ಸ್ವರಚಿತ ಕವನವನ್ನು ದಿನಾಂಕ: 15–4–2026 ರ ಒಳಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕ ಅಧ್ಯಕ್ಷ ಹೆಚ್. ಎಫ್.ಮಸ್ಕಿ (8867794508) ವಾಟ್ಸ್ಪ ಅಥವಾ ಎಲ್.ಬಿ.ಕೆ. ಕಾಲೇಜಿನ ಪ್ರಾಚಾರ್ಯ ಪರಶುರಾಮ ಮಲ್ಲಾಪೂರ (9916758739 ) ವಾಟ್ಸ್ಪಗೆ ಕಳಿಸಿಕೊಡಬೇಕಾಗಿ ವಿನಂತಿ ಕವಿಗೋಷ್ಠಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರಿಗೆ ನಗದು ಹಾಗೂ ಪುಸ್ತಕ ರೂಪದ ಬಹುಮಾನ ಭಾಗವಹಿಸಿದವ–ರಿಗೆಲ್ಲ ಪ್ರಶಸ್ತಿ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಬೀರಪ್ಪ ಶಂಭೋಜಿ 9448633770 ಸಂಪರ್ಕಿಸಬಹುದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಸರ್ಕಾರದ ಸೌಕರ್ಯ ಪಡೆದುಕೊಳ್ಳಲು ಸಂಘಟಿತರಾಗಿ: ನಾಗರಾಜ ಪೂಜಾರ್






ನೈಜ್ಯ ದೆಸೆ ನ್ಯೂಸ್

**ಕೃಷಿ ಕೂಲಿಕಾರ್ಮಿಕರು ಸಂಘಟಿತರಾಗಿ ಸರ್ಕಾರದಿಂದ ಶಾಸನಬದ್ಧವಾಗಿ ದೊರೆಯುವ ಸೌಕರ್ಯಗಳನ್ನು ಪಡೆದುಕೊಳ್ಳಬೇಕು ಎಂದು ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ (ಆಯರ್ಲಾ) ರಾಜ್ಯ ಸಂಚಾಲಕ ನಾಗರಾಜ ಪೂಜಾರ್ ಹೇಳಿದರು.**

ತಾಲೂಕಿನ ದಢೇಸುಗೂರು ಗ್ರಾಮದಲ್ಲಿ ಶುಕ್ರವಾರ ಆಯರ್ಲಾ ಗ್ರಾಮ ಘಟಕ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಕೃಷಿ ಕೂಲಿ ಕಾರ್ಮಿಕರಿಗೆ ನಿಗದಿತ ಕೂಲಿ ಮತ್ತು ಆದಾಯ ಇಲ್ಲ. ಇದ–ರಿಂದ ಕುಟುಂಬ ನಿರ್ವಹಣೆ ಮಾಡಲು ಸಂಕಷ್ಟ ಎದುರಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ, ಹಾಗೂ ನಿರುದ್ಯೋಗ ಸಮಸ್ಯೆ, ಅನಾರೋಗ್ಯ ಇವರನ್ನು ಬಾಧಿಸುತ್ತಿವೆ. ಕೃಷಿ ಸೇರಿ ಗ್ರಾಮೀಣ ಪ್ರದೇಶದ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ಕೃಷಿ ಕೂಲಿಕಾರ ಕುಟುಂಬಗಳು ಇಂದಿಗೂ ಹಸಿವಿನಿಂದ ಬಳಲುತ್ತಿವೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಕೃಷಿ ಕೂಲಿಕಾರ್ಮಿಕರನ್ನು ಸಂಪೂರ್ಣ ನಿರ್ಲಕ್ಷಿಸಿದ್ದು, ಅಲ್ಪಸ್ವಲ್ಪ ಆಸರೆಯಾಗಿದ್ದ, ಮನರೇಗಾ ಯೋಜನೆ ಬದಲಿಸಿ, ಜಿರಾಮ್‌ಜಿ ಯೋಜನೆ ಜಾರಿಗೊಳಿಸುವ ಮೂಲಕ ಉದ್ಯೋಗದ ಹಕ್ಕನ್ನೇ ಕಸಿದುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐಎಂಎಲ್ ಲಿಬರೇಶನ್ ರಾಜ್ಯ ಸಮಿತಿ ಸದಸ್ಯ ವಿಜಯರ್ ದೊರ್ರೈರಾಜು ಮಾತನಾಡಿ, ಸರ್ಕಾರಗಳು ಗ್ರಾಮೀಣ ಪ್ರದೇಶದಲ್ಲಿ ಮನೆಗೊಂದು ಶೌಚಾಲಯ ಎಂದು ಅಭಿಯಾನ ನಡೆಸುತ್ತವೆ. ಮನೆಯೇ ಇಲ್ಲದವ–ರಿಗೆ ಶೌಚಾಲಯ ಎಲ್ಲಿಂದ ಬರುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ದುಡಿಯುವ ಜನ ವಿರೋಧಿ ಕಾಯ್ದೆಯ ಕಾನೂನುಗಳನ್ನು ಜಾರಿಗೆ ತಂದು, ತಾವು ಜನಪರ ಎಂದು ಬಿಂಬಿಸುತ್ತಿವೆ.

ಇದನ್ನು ಗ್ರಾಮೀಣ ಪ್ರದೇಶದ ಕೂಲಿಕಾರರು ಅರಿತುಕೊಳ್ಳಬೇಕು ಎಂದರು.

ಗ್ರಾಮ ಘಟಕ ರಚನೆ: ದಢೇಸುಗೂರು ಆಯರ್ಲಾ ಗ್ರಾಮ ಘಟಕದ ನೂತನ ಅಧ್ಯಕ್ಷರನ್ನಾಗಿ ವೀರಭದ್ರಪ್ಪ, ಉಪಾಧ್ಯಕ್ಷರಾಗಿ ತುಳಸಪ್ಪ, ಆರೀಫ್, ಕಾರ್ಯದರ್ಶಿಯಾಗಿ ಮಂಜಪ್ಪ, ಸಂಘಟನಾ ಕಾರ್ಯದರ್ಶಿಗಳಾಗಿ ಸುಂಕಪ್ಪ, ನಾಗೇಶ, ಶಿವಪ್ಪ, ಗೌರವಾಧ್ಯಕ್ಷರಾಗಿ ಮುದಿಯಪ್ಪ ,ಖಜಾಂಚಿ ವಿನಯ್ ಇವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ: ಆಯರ್ಲಾ ಜಿಲ್ಲಾ ಘಟಕ ಸಹ ಸಂಚಾಲಕ ರಾಘವೇಂದ್ರ ಉಪ್ಪಳ, ಸಿಪಿಐಎಂಎಲ್ ಲಿಬರೇಶನ್ ತಾಲ್ಲೂಕು ಘಟಕ ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ, ಪಂಪಾಪತಿ ಸೇರಿದಂತೆ ಇನ್ನಿತರರು ಇದ್ದರು. ಆಯರ್ಲಾ ಜಿಲ್ಲಾ ಸಂಚಾಲಕ ಆರ್. ಎಚ್.ಕಲಮಂಗಿ ಕಾರ್ಯಕ್ರಮ ನಿರ್ವಹಿಸಿದರು.

## ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸುರಕ್ಷತೆ, ಭದ್ರತೆ ಒದಗಿಸಲು ಕರ್ನಾಟಕ ವಿದ್ಯಾರ್ಥಿ ವೇದಿಕೆ ಆಗ್ರಹ!

ನೈಜ್ಯ ದೆಸೆ ನ್ಯೂಸ್

**ನಗರದ ಕೆ.ಕೆ.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸುರಕ್ಷತೆ, ಭದ್ರತೆ ಒದಗಿಸಬೇಕು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ವಿದ್ಯಾರ್ಥಿ ವೇದಿಕೆ ವತಿಯಿಂದ ಘಟಕ ವ್ಯವಸ್ಥಾಪಕ–ರಿಗೆ ಶುಕ್ರವಾರ ಮನವಿ ಪತ್ರ ಸಲ್ಲಿಸಲಾಯಿತು.**



ರಾಯಚೂರು ಜಿಲ್ಲೆಯಲ್ಲೇ ಸಿಂಧನೂರು ನಗರವು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಆದರೆ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸುರಕ್ಷತೆ–ಭದ್ರತೆ ಇಲ್ಲದಂತಾಗಿದೆ. ಸದಾ ಜನದಟ್ಟಣೆಯಿಂದ ತುಂಬಿ ತುಳುಕುವ ನಿಲ್ದಾಣದಲ್ಲಿ ಮೂಲ ಸೌಕರ್ಯ ಕೊರತೆ ಹಾಗೂ ನಿರ್ವಹಣೆ ಸಮಸ್ಯೆ ಎದ್ದು ಕಾಣುತ್ತಿದ್ದು, ಗೌಜು–ಗದ್ದಲದ ನಡುವೆ ಪ್ರಯಾಣಿಕರು ಅಭದ್ರತೆಯಲ್ಲಿ ಪ್ರಯಾಣಿಸುತ್ತಾರೆ. ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಕಲಬುರ್ಗಿ ಮಾರ್ಗದ ಪ್ರಮುಖ ಬಸ್ ನಿಲ್ದಾಣ ಆಗಿರುವುದರಿಂದ ದಿನವೂ ಸಾವಿರಾರು ಪ್ರಯಾಣಿಕರು ಇಲ್ಲಿಂದ ಹಲವು ಪ್ರದೇಶಗಳಿಗೆ ಪ್ರಯಾಣಿಸುತ್ತಾರೆ.

ಶಕ್ತಿ ಯೋಜನೆಯಿಂದಾಗಿ ದಿನವೂ ಮಹಿಳಾ ಪ್ರಯಾಣಿಕರ ಸಂಖ್ಯೆ ಜಾಸ್ತಿಯಿರುತ್ತದೆ. ಆದರೆ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ನಿಲ್ದಾಣದ ಆವರಣದಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಸುರಕ್ಷತೆಗೆ ಕೆಕೆಆರ್‌ಟಿಸಿ ಕ್ರಮ ಕೈಗೊಳ್ಳದಿರುವುದರಿಂದ ಪ್ರಯಾಣಿಕರು ದಿನವೂ ಕಿರಿಕಿರಿ ಅನುಭವಿಸುತ್ತಿದ್ದಾರೆ. ಮಾ.16ರಂದು ನಿಲ್ದಾಣದ ಪ್ರವೇಶ ದ್ವಾರದಲ್ಲೇ ಸಾರಿಗೆ ಸಂಸ್ಥೆ ಬಸ್ಸೊಂದು ಹರಿದು ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ ಬೇವಿನಾಳ ಗ್ರಾಮದ ದೊಡ್ಡ ಈರಮ್ಮ ಬಸಣ್ಣ (38) ಧಾರುಣವಾಗಿ ಮೃತಪಟ್ಟಿದ್ದು, ಇದು ಇಲಾಖೆಯ ಆಡಳಿತ ಬೇಜವಾಬ್ದಾ–ರಿಗೆ ಸಾಕ್ಷಿಯಾಗಿದೆ ಎಂದು ಸಂಘಟನೆಯ ಪದಾಧಿಕಾರಿಗಳು ಅಧಿಕಾರಿಗಳ ಗಮನ ಸೆಳೆದರು.

ನಗರದಲ್ಲಿ ಪದವಿ ಪೂರ್ವ ಹಾಗೂ ಪದವಿ ವ್ಯಾಸಂಗದ ಅಂದಾಜು 40ಕ್ಕೂ ಹೆಚ್ಚು ಕಾಲೇಜುಗಳಿವೆ. ಹಾಗಾಗಿ ದಿನವೂ ಗ್ರಾಮೀಣ ಪ್ರದೇಶದಿಂದ 5 ರಿಂದ 6 ಸಾವಿರ ವಿದ್ಯಾರ್ಥಿಗಳು ಅಭ್ಯಾಸಕ್ಕಾಗಿ ಸಿಂಧನೂರು ನಗರಕ್ಕೆ ಆಗಮಿಸುತ್ತಾರೆ. ಅದರಲ್ಲಿ ಬಹುತೇಕ ವಿದ್ಯಾರ್ಥಿಗಳು ಬಸ್ ನಿಲ್ದಾಣದ ಮೂಲಕ ತಮ್ಮ ಗ್ರಾಮಗಳಿಗೆ ತೆರಳುವುದರಿಂದ ಬೆಳಿಗ್ಗೆ ಮತ್ತು ಮಧ್ಯಾಹ್ನ ವ್ಯಾಪಕ ದಟ್ಟಣೆ ಇರುತ್ತದೆ. ಬಸ್ ನಿಲ್ದಾಣಕ್ಕೆ ಕಾಂಪೌಂಡ್ ಇಲ್ಲ ಹೀಗಾಗಿ ಅನಧಿಕೃತ ವಾಹನಗಳು ಕೂಡ ಒಳಗಡೆ ಪ್ರವೇಶಿಸುತ್ತವೆ. ಇನ್ನೂ ಬಹುತೇಕ ಬಸ್ ಚಾಲಕರು ಮೊಬೈಲ್‌ನಲ್ಲಿ ಮಾತನಾಡುತ್ತಲೇ ನಿಲ್ದಾಣದಲ್ಲಿ ಬಸ್ ಚಲಾಯಿಸುತ್ತಾರೆ. ಇಂತಹ ಸಂದರ್ಭದಲ್ಲಿ ಅಪಘಾತವಾದರೆ ಯಾರು ಹೊಣೆ ವಿವಿಧ ಮಾರ್ಗದ ಸಾರಿಗೆ ಬಸ್‌ಗಳು ಒಳ ಪ್ರವೇಶ ಮತ್ತು ಹೊರಗಡೆ ಹೋಗುವಾಗ ವಿಪರೀತ ಸಮಸ್ಯೆ ಆಗುತ್ತಿದೆ. ಮುಖ್ಯ ರಸ್ತೆಯನ್ನು ಹಲವರು ಅತಿ–ಕ್ರಮಿಸಿರುವುದೇ ಇದಕ್ಕೆ ಕಾರಣ. ಆದರೆ ಈ ಬಗ್ಗೆ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯವರಾಗಲಿ, ಟ್ರಾಫಿಕ್‌ನವರಾಗಲಿ ಗಮನ ಹರಿಸುತ್ತಿಲ್ಲ ಮತ್ತು ಕಠಿಣ ಕ್ರಮಕ್ಕೂ ಸಹ ಮುಂದಾಗುತ್ತಿಲ್ಲ.

ನಿಲ್ದಾಣದಲ್ಲಿ ಮದ್ಯ ವ್ಯಸನಿಗಳ ಹಾವಳಿಯಂತೂ ಮಿತಿಮೀರಿದೆ, ಪ್ರಯಾಣಿಕರು ಸಂಚರಿಸುವ ಕಡೆಗೆ ಎಲ್ಲೆಂದರಲ್ಲಿ ಮಲಗುವುದು, ಅನುಚಿತವಾಗಿ ವರ್ತಿಸುವುದು ಮಾಡುತ್ತಾರೆ. ಇದರಿಂದ ಸಾರ್ವಜನಿಕರು ಮುಜುಗರ ಅನುಭವಿಸುತ್ತಿದ್ದಾರೆ. ಪ್ರಯಾಣಿಕರ ಸುರಕ್ಷತೆಯಿಂದ ಅಳವಡಿಸಿದ ಕಬ್ಬಿಣದ ಸರಳುಗಳು ಎಲ್ಲೆಂದರಲ್ಲಿ ಮುರಿದು ಹೋಗಿವೆ. ಇನ್ನೂ ದೊಡ್ಡ ಬಸ್ ನಿಲ್ದಾಣವಾಗಿದ್ದರೂ ಕೂಡ ಕೂಡಲು ಆಸನ ಕೊರತೆಯಿಂದ ವೃದ್ಧರು, ವಿಕಲಚೇತನರು, ಗರ್ಭಿಣಿಯರು ಹಾಗೂ ಬಾಣಂತಿಯರು ಸಮಸ್ಯೆ ಅನುಭವಿಸುವಂತಾಗಿದೆ. ಆದರೆ ಈ ಬಗ್ಗೆ ಸಾರಿಗೆ ಸಂಸ್ಥೆಯವರು ಸೌಲಭ್ಯ ಒದಗಿಸಲು ಮುಂದಾಗಿಲ್ಲ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಬಸ್ ನಿಲ್ದಾಣದಿಂದ ಕುಷ್ಟಗಿ ಮಾರ್ಗದ ಕಡೆಗೆ ಸಾರಿಗೆ ಬಸ್‌ಗಳು ಹೊರಗೆ ತೆರಳುವ ಮಾರ್ಗ ಅತ್ಯಂತ ಕಿರಿದಾಗಿದ್ದು, ಈ ಮಾರ್ಗದಲ್ಲಿ ಪ್ರಯಾಣಿಕರು ಅಂಗೈಯಲ್ಲಿ ಜೀವವಿಡಿದು ನಿಲ್ದಾಣ ಪ್ರವೇಶಿಸುತ್ತಾರೆ. ಒಂದು ಕಡೆಗೆ ಅಂಬಾದೇವಿ ದೇವಸ್ಥಾನವಿದ್ದು, ಇನ್ನೊಂದು ಕಡೆಗೆ ವಾಣಿಜ್ಯ ಮಳಿಗೆಗಳು ಇರುವುದರಿಂದ ಪ್ರವೇಶ ದ್ವಾರ ಇಕ್ಕಟ್ಟಾಗಿದೆ. ಇನ್ನೂ ರಾಯಚೂರು–ಬಳ್ಳಾರಿ ಮಾರ್ಗದಿಂದ ನಿಲ್ದಾಣ ಪ್ರವೇಶಿಸುವ ದ್ವಾರದಲ್ಲೇ ತಗ್ಗು–ದಿನ್ನೆಗಳು ಬಿದ್ದಿವೆ. ಹಂಪ್ ಇಲ್ಲದ ಕಾರಣ ಅತಿವೇಗವಾಗಿ ಬಸ್‌ಗಳು ನಿಲ್ದಾಣ ಪ್ರವೇಶಿಸುವುದ–ರಿಂದ ಪ್ರಯಾಣಿಕರು ಎದ್ದೆನೋ ಬಿದ್ದೆನೋ ಎಂದು ಓಡುವಂತಾಗಿದೆ. ಅಲ್ಲದೇ ವೃದ್ಧರು, ವಿಕಲಚೇತನರು ಹಾಗೂ ಚಿಕ್ಕಮಕ್ಕಳು ನಿಲ್ದಾಣದಿಂದ ಸುರಕ್ಷಿತವಾಗಿ ಹೊರಗಡೆ ಬರಲು ಸಮಸ್ಯೆ ಅನುಭವಿಸುತ್ತಿದ್ದಾರೆ ಎಂದು ಮನವಿ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. ಬಸ್ ನಿಲ್ದಾಣದ ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ಎರಡೂ ಪ್ರವೇಶ ದ್ವಾರಗಳಲ್ಲಿ ಕಾವಲುಗಾರರನ್ನು ನೇಮಿಸಬೇಕು.

ಹಾಗೂ ಕಬ್ಬಿಣದ ಸರಳಿನ ಪಾದಾಚಾರಿ ಮಾರ್ಗವನ್ನು ನಿರ್ಮಿಸಿ ಪ್ರಯಾಣಿಕರು ಸುಲಭವಾಗಿ ಸಂಚರಿಸಲು ಕೂಡಲೇ ಅನುಕೂಲ ಕಲ್ಪಿಸಬೇಕು, ದಿನವೂ ಗ್ರಾಮೀಣ ಪ್ರದೇಶದ ಅಂ–ದಾಜು 5ರಿಂದ 6 ಸಾವಿರ ವಿದ್ಯಾರ್ಥಿಗಳು ಬಸ್ ನಿಲ್ದಾಣವನ್ನು ಪ್ರವೇಶಿಸಿ ಆ ಮೂಲಕ ಸ್ವಗ್ರಾಮಕ್ಕೆ ತೆರಳುತ್ತಿದ್ದು, ಅವರ ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ನಗರದ ಬಸ್ ನಿಲ್ದಾಣದಲ್ಲಿ ಮದ್ಯ ವ್ಯಸನಿಗಳು ಮದ್ಯ ಕುಡಿದು ಎಲ್ಲೆಂದರಲ್ಲಿ ಮಲಗುವುದು, ಪ್ರಯಾಣಿಕರ ಜೊತೆಗೆ ಅನುಚಿತವಾಗಿ ವರ್ತಿಸುವುದಲ್ಲದೇ ಅರೆ–ಬರೆ ಬಟ್ಟೆಗಳನ್ನು ಧರಿಸಿ ಮುಜುಗರ ಅನುಭವಿಸುವಂತೆ ವರ್ತಿಸುತ್ತಿದ್ದು, ಅಂತವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು. ಸಿಂಧನೂರು ಬಸ್ ನಿಲ್ದಾಣಕ್ಕೆ ದಿನವೂ ಸಾವಿರಾರು ಪ್ರಯಾಣಿಕರು ಆಗಮಿಸುವುದ–ರಿಂದ ಆಸನಗಳ ಕೊರತೆ ಇದ್ದು,

ಇನ್ನಷ್ಟು ಆಸನಗಳ ಸೌಲಭ್ಯ ಒದಗಿಸಬೇಕು, ವಿಕಲಚೇತನರು, ಅಂಧರು, ಮಕ್ಕಳು ಹಾಗೂ ವಯೋವೃದ್ಧ ಪ್ರಯಾಣಿಕರಿಗೆ ಬಸ್ ನಿಲ್ದಾಣದಲ್ಲಿ ಯಾವುದೇ ರೀತಿಯಲ್ಲಿ ಸಮಸ್ಯೆ ಆಗದಂತೆ ಸೂಕ್ತ ಸೌಲಭ್ಯ ಒದಗಿಸಬೇಕು ಹಾಗೂ ಸುರಕ್ಷತೆಯನ್ನು ಖಚಿತ ಪಡಿಸಬೇಕು, ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು, ಕುಷ್ಟಗಿ ಮಾರ್ಗದ ಕಡೆಗೆ ಸಾರಿಗೆ ಬಸ್‌ಗಳು ತೆರಳುವ ದ್ವಾರ (ಅಂಬಾದೇವಿ ಗುಡಿಯ ಪಕ್ಕದ ದಾರಿ) ಅತ್ಯಂತ ಚಿಕ್ಕದಾಗಿದ್ದು, ಈ ಮಾರ್ಗದಲ್ಲಿ ಬಸ್ ಹಾಗೂ ಪ್ರಯಾಣಿಕರು ಸಂಚರಿಸಲು ಸಮಸ್ಯೆಯಾಗಿದ್ದು, ಹಾಗಾಗಿ ಈ ಮಾರ್ಗವನ್ನು ಅಗಲೀಕರಿಸಿ, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನಗಳನ್ನು ಬಹಳಷ್ಟು ನಿಲುಗಡೆ ಮಾಡುತ್ತಿದ್ದು, ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದ್ದು, ಈ ಕೂಡಲೇ ಸೂಕ್ತ ಕ್ರಮ ಜರುಗಿಸಬೇಕು, ಬಸ್ ನಿಲ್ದಾಣದಲ್ಲಿ ಪಾದಾಚಾರಿ ಮಾರ್ಗದಲ್ಲಿ ಬೈಕ್ ಹಾಗೂ ಕಾರು ಪಾರ್ಕಿಂಗ್ ಮಾಡದಂತೆ ಕ್ರಮ ಜರುಗಿಸಬೇಕು ಎಂಬ ಬೇಡಿಕೆಗಳ ಮನವಿಪತ್ರವನ್ನು ಸಾರಿಗೆ ಇಲಾಖೆ ಅಧಿಕಾರಿ ಅಮರೇಶ ಅವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯ ಸಂಚಾಲಕ ಇ.ಎಚ್.ನಾಯಕ್, ತಾಲೂಕು ಸಂಚಾಲಕ ದುರುಗೇಶ ಸಾನಬಾಳ, ವಿದ್ಯಾರ್ಥಿಗಳಾದ ಪ್ರದೀಪ್, ಭೀಮೇಶ್, ಸ್ವಾಮಿ ನಾಯಕ್, ದುರುಗಪ್ಪ, ವಿನೋದ್ ಕುಮಾರ್, ಶರಣಬಸವ, ಶಾಂಭವಿ, ಶಾರದ ನಾಯಕ್, ಐಶ್ವರ್ಯ, ಶರಣ್, ಅಡಿವೇಶ, ಸುದೀಪ್, ರಂಜಾನ್ ಸಾಬ್, ದರ್ಶನ್ ಇನ್ನಿತರರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಮೆಕ್ಯಾನಿಕಲ್ ಮತ್ತು ಸ್ಮಾರ್ಟ್ ಮ್ಯಾನುಫ್ಯಾಕ್ಚರಿಂಗ್

ಮೆಕ್ಯಾನಿಕಲ್ ಮತ್ತು ಸ್ಮಾರ್ಟ್ ಮ್ಯಾನುಫ್ಯಾಕ್ಚರಿಂಗ್) ಎಂಬುದು 4 ವರ್ಷಗಳ (8 ಸೆಮಿಸ್ಟರ್‌ಗಳು) ಪದವಿ ಕೋರ್ಸ್. ಇದು ಸಾಂಪ್ರದಾಯಿಕ ಯಾಂತ್ರಿಕ ಇಂಜಿನಿಯರಿಂಗ್ (Machine design, Thermodynamics) ಜೊತೆಗೆ IoT, Robotics, AI, ಮತ್ತು Data Analytics ತಂತ್ರಜ್ಞಾನಗಳನ್ನು ಬಳಸಿ ಉತ್ಪಾದನಾ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸುವುದನ್ನು ಕಲಿಸುತ್ತದೆ. ಕೋರ್ಸ್ ವಿವರಗಳು (Course Details): ಅರ್ಹತೆ (Eligibility): PUC ಅಥವಾ 10+2 (Physics, Chemistry, Mathematics ನಲ್ಲಿ ಕನಿಷ್ಠ 50% ಅಂಕಗಳು). ಪ್ರವೇಶ ಪರೀಕ್ಷೆ (Entrance Exam): KCET (ಕರ್ನಾಟಕ), JEE Main, ಅಥವಾ ವಿಶ್ವವಿದ್ಯಾಲಯ ಮಟ್ಟದ ಪರೀಕ್ಷೆಗಳು. ಅಂಆ/ಅಂಒ & ಕಂಪ್ಯೂಟರ್ ಇಂಟಿಗ್ರೇಟೆಡ್ ಮ್ಯಾನುಫ್ಯಾಕ್ಚರಿಂಗ್ (CIM). ಇಂಡಸ್ಟ್ರಿಯಲ್ IoT (IIoT) & ರೊಬೊಟಿಕ್ಸ್. ಉತ್ಪಾದನಾ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ. ಸಂಯೋಜಿತ ಉತ್ಪಾದನೆ (3D ಮುದ್ರಣ). ಡೇಟಾ ವಿಶ್ಲೇಷಣೆ ಮತ್ತು ಸ್ಮಾರ್ಟ್ ಸೆನ್ಸರ್‌ಗಳು. ಉದ್ಯೋಗಾವಕಾಶಗಳು ಕೋರ್ಸ್ ವಿಶೇಷತೆ: ಈ ಕೋರ್ಸ್ ವಿದ್ಯಾರ್ಥಿಗಳನ್ನು Industry 4.0 ಕ್ಕೆ ಸಿದ್ಧಪಡಿಸುತ್ತದೆ, ಅಂದರೆ ಆಧುನಿಕ ಕಾರ್ಖಾನೆಗಳಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಸಿ ಉತ್ಪಾದನೆ ಹೆಚ್ಚಿಸಲು.

## ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಏಪ್ರಿಲ್ 14ರಂದು ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಯನ್ನು ಆಚರಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.**

ಅಂದು ಬೆಳಿಗ್ಗೆ 9:30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪೂಜೆ ಹಾಗೂ ಮಾಲಾರ್ಪಣೆ ಕಾರ್ಯಕ್ರಮ ನಡೆಯಲಿದೆ. ನಂತರ ರಂಗಮಂದಿರದವರೆಗೆ ಮೆರವಣಿಗೆ ಮಾಡಲಾಗುವುದು. ಬೆಳಿಗ್ಗೆ 11ಗಂಟೆಗೆ ಶ್ರೀ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಮತ್ತು ಕುವೆಂಪು ಕನ್ನಡ ಅಧ್ಯಯನದ ನಿರ್ದೇಶಕರಾದ ಡಾ.ಬಿ.ಎಂ.ಪುಟ್ಟಯ್ಯ ಅವರಿಂದ ಉಪನ್ಯಾಸ ಕಾರ್ಯಕ್ರಮವಿದ್ದು, ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಮಾಜದ ಎಲ್ಲಾ ಮುಖಂಡರು, ವಿವಿಧ ಸಂಘ- ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಸ್ಕಾಂ ನಿಂದ ಏಪ್ರಿಲ್ 12ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ವಡವಟ್ಟಿ ವಿದ್ಯುತ್ ಉಪ-ಕೇಂದ್ರದ ಸಿಂಗನೋಡಿ, ಬಾಪೂರು, ಮಂಡ್ಲಗೇರಾ, ಬಾಯಿದೊಡ್ಡಿ, ಸಿಂಗನೋಡಿ ತಾಂಡ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಏಪ್ರಿಲ್ 12ರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು,**




ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಸ್ಕಿಯಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರನಗೌಡ ಲೆಕ್ಕಿಹಾಳ ನೇತೃತ್ವದಲ್ಲಿ ಸುದ್ದಿಗೋಷ್ಠಿ

## ಮಸ್ಕಿ ಕ್ಷೇತ್ರದಿಂದ 2028ಕ್ಕೆ ಬಿಜೆಪಿ ಪಕ್ಷದಿಂದ ನಾನೇ ಅಭ್ಯರ್ಥಿ: ಪ್ರತಾಪಗೌಡ ಪಾಟೀಲ್ ಸ್ಪಷ್ಟನೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: 'ಮುಂಬರುವ 2028ಕ್ಕೆ ಮಸ್ಕಿ ವಿಧಾನಸಭಾ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ನಾನೇ ಸ್ಪರ್ಧಿಸುತ್ತೇನೆ, ರಾಜ್ಯ ಕೋರ್ ಕಮಿಟಿಯೂ ಸಹ ಸಹಮತ ಸೂಚಿಸಿದೆ ಆದ್ದರಿಂದ ಕಾರ್ಯಕರ್ತರು ಊಹಾಪೋಹಗಳಿಗೆ ಕಿವಿಗೊಡಬೇಡಿ' ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಸ್ಪಷ್ಟಪಡಿಸಿದರು. ಮಸ್ಕಿ ಪಟ್ಟಣದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ನೇತೃತ್ವದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ಅತ್ಯಂತ ಗಟ್ಟಿಯಾಗಿ ಕಟ್ಟಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಎಲ್ಲಿ ಬೇಕಾದರೂ ಸ್ಪರ್ಧಿಸಬಹುದು ಯಾರ ಅಭ್ಯಂತರವಿಲ್ಲ.**

ಆದರೆ ಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಾನೇ ಸ್ಪರ್ಧೆ ಮಾಡುತ್ತೇನೆ. ಕಾರ್ಯಕರ್ತರಲ್ಲಿ ಯಾವುದೇ ಗೊಂದಲ ಬೇಡ ಎಂದರು. ಈಗಾಗಲೇ ರಾಷ್ಟ್ರ ಮತ್ತು ರಾಜ್ಯದ ಬಿಜೆಪಿ ನಾಯಕರು ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳುವಂತೆ ಸೂಚಿಸಿದ್ದಾರೆ. ಶ್ರೀರಾಮುಲುರಿಂದ ಗೊಂದಲ ಸೃಷ್ಠಿ: ಇತ್ತೀಚೆಗೆ ಶ್ರೀರಾಮುಲು ಅವರು ಕ್ಷೇತ್ರದ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರಿಂದ ಮುಂದಿನ 2028ರ ಚುನಾವಣೆಗೆ ಮಸ್ಕಿ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂದು ಗೊಂದಲ ಸೃಷ್ಠಿಯಾಗಿದೆ. ಆದರೆ ಕನ್ನಾಳ ಗ್ರಾಮಕ್ಕೆ ತೆರಳುವ ಮುನ್ನಾ ಸುದ್ದಿಗೋಷ್ಠಿ ನಡೆಸಿ ಮಸ್ಕಿ ಕ್ಷೇತ್ರದಿಂದ ನಾನು ಸ್ಪರ್ಧಿಸುವುದಿಲ್ಲ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಪಕ್ಷವನ್ನು ಸಂಘಟಿಸುತ್ತೇನೆಂದು ಹೇಳಿದ್ದಾರೆ.




### ಕಾಂಗ್ರೆಸ್ ಅತೃಪ್ತ ಬಣದಿಂದ ಗೊಂದಲ:

**ಕಾಂಗ್ರೆಸ್ ಪಕ್ಷದಲ್ಲಿ ಒಂದು ಅತೃಪ್ತ ಬಣ ಹುಟ್ಟಿಕೊಂಡಿದೆ. ಈ ಹಿಂದೆ ನನ್ನ ಜತೆ ಇದ್ದರೂ, ಈಗ ಶಾಸಕ ಬಸನಗೌಡರ ಜತೆಗೆ ಕೂಡ ವ್ಯವಹಾರ ಕೆಡಿಸಿಕೊಂಡಿದ್ದಾರೆ. ಅವರಿಗೆ ನೆಲೆ ಇಲ್ಲದ ಕಾರಣ ಕ್ಷೇತ್ರಕ್ಕೆ ಹೊಸ ಬಿಜೆಪಿ ಕ್ಯಾಂಡಿಡೇಟ್ಸ್ ಕರೆತಂದು ನೆಲೆ ನಿರ್ಮಿಸಿಕೊಳ್ಳಲು ಓಡಾಡುತ್ತಿರುವುದರಿಂದ ಬಿಜೆಪಿ ಅಭ್ಯರ್ಥಿ ಬದಲಾಗುತ್ತಾರೆಂದು ಕ್ಷೇತ್ರದ ಕಾರ್ಯಕರ್ತರಲ್ಲಿ ಗೊಂದಲ ನಿರ್ಮಾಣವಾಗಿದೆ. ಒಂದು ವೇಳೆ ಮಸ್ಕಿ ಕ್ಷೇತ್ರದಿಂದ ಬೇರೆ ಯಾರಾದರೂ ಸ್ಪರ್ಧೆ ಮಾಡುತ್ತಾರೆಂದರೆ ಇದಕ್ಕೆ ನಮ್ಮ ವಿರೋಧವಿರುತ್ತದೆ. ಯಾವುದೇ ಕಾರಣಕ್ಕೂ ಮಸ್ಕಿ ಕ್ಷೇತ್ರದಿಂದ ಬಿಜೆಪಿ ಪಕ್ಷದಿಂದ ನನ್ನನ್ನು ಬಿಟ್ಟರೆ ಬೇರೆ ಯಾರು ಸ್ಪರ್ಧೆ ಮಾಡಲು ಬರುವುದಿಲ್ಲ ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹೇಳಿದರು.**

ಹೊರತು ಎಲ್ಲಿಯೂ ಮಸ್ಕಿ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತೇನೆಂದು ಹೇಳಿಲ್ಲ. ಆದ್ದರಿಂದ ಪಕ್ಷದ ಕಾರ್ಯಕರ್ತರು ಮತ್ತು ಮತದಾರರು ಗೊಂದಲಕ್ಕೀಡಾಗಬಾರದೆಂದು ಹೇಳಿದರು. ಪಕ್ಷದ ರಾಜ್ಯಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಮತ್ತು ವರಿಷ್ಠರನ್ನು ಭೇಟಿಯಾಗಿದ್ದೇವೆ. ಅವರು ಅಭ್ಯರ್ಥಿ ನೀವೆ ಎಂದು ಸ್ಪಷ್ಟಿಕರಣ ನೀಡಿದ್ದಾರೆ. ಸ್ಥಳೀಯವಾಗಿ ನನ್ನ ನಾಯಕತ್ವ ಸಹಿಸಿಕೊಳ್ಳದವರು ಮುಂದಿನ ಚುನಾವಣೆಯಲ್ಲಿ ಪ್ರತಾಪಗೌಡರು ಸ್ಪರ್ಧಿಸುದಿಲ್ಲ ಎಂದು ಕೆಲವು ಕಡೆ ಚರ್ಚೆ ನಡೆಸಿದ್ದಾರೆ ಎನ್ನುವುದು ನನ್ನ ಗಮನಕ್ಕಿದೆ. ಶ್ರೀರಾಮುಲು ಅವರನ್ನು ಭೇಟಿ ಮಾಡಿದ್ದಾರೆಂಬ ಮಾಹಿತಿ ಇದೆ. ಪಕ್ಷ ವಿರೋಧಿ ಚಟುವಟಿಕೆ ಮಾಡುವವ ಬಗ್ಗೆ ಪಕ್ಷದ ನಾಯಕರ ಗಮನಕ್ಕೆ ತರಲಾಗಿದೆ.

ಮುಂದಿನ ಕ್ರಮ ನಮ್ಮ ನಾಯಕರು ತೆಗೆದುಕೊಳ್ಳುತ್ತಾರೆ. ಇಲ್ಲಿನ ಕೆಲ ಅತೃಪ್ತ ಬಿಜೆಪಿ ಹಾಗೂ ಕಾಂಗ್ರೆಸ್ಸಿನ ನಾಯಕರು ಇಂತಹ ಗೊಂದಲಗಳನ್ನು ಸೃಷ್ಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು ಇದ್ಯಾವುದಕ್ಕೂ ನಮ್ಮ ಬಿಜೆಪಿ ಕಾರ್ಯಕರ್ತರು ಗಮನ ಕೊಡದೆ ಪಕ್ಷ ಸಂಘಟನೆಯಲ್ಲಿ

**ಮಸ್ಕಿ ಕ್ಷೇತ್ರದಿಂದ ಪ್ರತಾಪ್ ಗೌಡ ಪಾಟೀಲ್ ಅವರೇ ಬಿಜೆಪಿ ಪಕ್ಷದಿಂದ ಸ್ಪರ್ಧಿಸಲಿದ್ದಾರೆ, ಇದಕ್ಕೆ ಜಿಲ್ಲಾ ಸಮಿತಿಯಿಂದ ಪೂರ್ಣ ಸಹಮತ ಇದೆ**
**-ವೀರನಗೌಡ ಲೆಕ್ಕಿಹಾಳ ಬಿಜೆಪಿ ಜಿಲ್ಲಾಧ್ಯಕ್ಷ.**

**ಬಿಜೆಪಿ ಪಕ್ಷಕ್ಕೆ ನಾನು ಮಾಡಿದ ತ್ಯಾಗ ದೊಡ್ಡದಿದೆ. ಆದ್ದರಿಂದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮಸ್ಕಿ ಕ್ಷೇತ್ರದಿಂದ ನಾನೇ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ.**
**ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್.**

ತೊಡಗಿಕೊಳ್ಳಿ ಎಂದು ಮನವಿ ಮಾಡಿದರು. ನಂತರ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ಮಾತನಾಡಿ ಪಕ್ಷವೂ ಪ್ರತಾಪಗೌಡ ಪಾಟೀಲ್‌ರ ಪರವಾಗಿದ್ದು, ಈ ಕ್ಷೇತ್ರದ ಅಭ್ಯರ್ಥಿ ಪ್ರತಾಪಗೌಡ ಪಾಟೀಲ್‌ರೇ ಬೆರ ಯಾರು ಬರುವುದಿಲ್ಲ. ಕೋರ್‌ಕಮಿಟಿ ಜಿಲ್ಲಾ ಕೂಡ ಮಾಜಿ ಶಾಸಕರ ಪರವಾಗಿದೆ ಎಂದು ಹೇಳಿದರು. ಅಲ್ಲದೆ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ ಸಂಬಂಧ ಸೂಕ್ತ ದಾಖಲೆಗಳೊಂದಿಗೆ ಹೈಕಮಾಂಡ್ ನಾಯಕರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು ಅಲ್ಲದೆ ಪಕ್ಷ ಸಂಘಟನೆಯಲ್ಲಿ ಮಸ್ಕಿ ಕ್ಷೇತ್ರವು ಅತ್ಯಂತ ಮುಂಚೂಣಿಯಲ್ಲಿದ್ದು ಮುಂಬರುವ ದಿನಗಳಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಬಸವಂತರಾಯ ಕುರಿ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ವೆಂಕಟೇಶ ಗುಡಸಲಿ, ಮಲ್ಲಪ್ಪ ಅಂಕುಶದೊಡ್ಡಿ, ಬಸವರಾಜ ಪಾಟೀಲ್ ಡೋಣಮರಡಿ, ರಮೇಶ ಸಿಳ್ಳೇದ್ ಸೇರಿದಂತೆ ಇನ್ನಿತರರಿದ್ದರು.

# ಭೂಮಿ ಮಂಜೂರಾತಿ ಆದೇಶ ರದ್ದುಪಡಿಸಲು: ಕರ್ನಾಟಕ ರೈತ ಸಂಘ ಆಗ್ರಹ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲೂಕ ಕಸಬಾ ಹೋಬಳಿ ಅಲ್ಲೇನಹಳ್ಳಿ-ಮಲ್ಲೆನಹಳ್ಳಿ ಗ್ರಾಮದ ಕೋಟಿ ಬೆಲೆ ಬಾಳುವ ಸರಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಯೊಬ್ಬರಿಗೆ ಮಾಡಿರುವ ಮಂಜೂರಾತಿಗಳನ್ನು ಪಡಿಸಬೇಕೆಂದು ಕರ್ನಾಟಕ ರೈತ ಸಂಘ (ಎಐಕೆಕೆಎಸ್)ಯಿಂದ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಶುಕ್ರವಾರ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು.**

ನಂತರ ಸಂತೋಷ ಹಿರೇದಿನ್ನಿ ಮಾತನಾಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲೂಕು ಕಸಬಾ ಹೋಬಳಿ ಅಲ್ಲೇನಹಳ್ಳಿ-ಮಲ್ಲೇನಹಳ್ಳಿ ಜೋಡಿ ಗ್ರಾಮಗಳ ಸರ್ವೆ ನಂ. 37ರಲ್ಲಿ ಸರಕಾರಿ ಹಾಗೂ ಸಾರ್ವಜನಿಕರ ಭೂಮಿಯಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪಟ್ಟಿ ಹಾಗೂ ಸಾಗುವಳಿಯಲ್ಲಿದ್ದು, ಈ ಪೈಕಿ 375 ಎಕರೆ ಗಾಯರಾಣ ಮತ್ತು 84 ಎಕರೆ ಬಿ ಖಾರಾಬ ಭೂಮಿ ಇದ್ದು, ಸರ್ವೆ ನಂ. 97ರ 835 ಎಕರೆ 34 ಗುಂಟೆ ಭೂವಿಯು ನೆಲಗಳ್ಳರಾದ ಎಂಎಸ್ ರಾಮಯ್ಯ ಅವರ ಕುಟುಂಬದ ಸದಸ್ಯರ ಹೆಸರಿಗೆ ವರ್ಗಾವಣೆ ಆಗಿದೆ.

ಸದರಿ ಸರ್ವೇ ನಂಬರ್ ನಲ್ಲಿ ತಮ್ಮ ಪಟ್ಟದ ಜಮೀನು ಹಾಗೂ ಭೂ ರಹಿತರ ಸಾಗುವಳಿ ಕಳೆದುಕೊಂಡ ಈ ಗ್ರಾಮಗಳ ರೈತರು 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಒಕ್ಕೂಟ' ಅಡಿಯಲ್ಲಿ 15 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಇವರೆಲ್ಲ ಸ್ವಂತ ಹಾಗೂ ಸರ್ಕಾರಿ ಭೂಮಿಯಿಂದ ಹೊರ ಹಾಕಲ್ಪಟ್ಟ ನಿರಾಶ್ರಿತರಾಗಿದ್ದಾರೆ. ಇವರ ಪರವಾಗಿ, ಕರ್ನಾಟಕ ರಾಷ್ಟ್ರ ಪಕ್ಷವೂ ಶಕ್ತಿಮೀರಿ ಹೋರಾಡುತ್ತಿದೆ. ಕರ್ನಾಟಕ ಕಂದಾಯ ಕಾಯ್ದೆ, ಅರಣ್ಯ ಕಾಯ್ದೆಗಳು, ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆಗಳು, ಭೂ ಮಂಜೂರಾತಿ ಕಾಯ್ದೆಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ ಭೂಮಿ ವಿಲೇವಾರಿ ಪ್ರತಿಬಂಧಕ ಕಾಯ್ದೆಗಳು, ನಗರ ಪ್ರದೇಶ ಭೂ ಸುಧಾರಣಾ ಕಾಯ್ದೆಗಳು ಉಲ್ಲಂಘನೆಯಾಗಿವೆ.


ಆದ್ದರಿಂದ ದೇವನಹಳ್ಳಿ ತಹಶೀಲ್ದಾರರ ಮೂಲಕ ನೀಡಲಾದ ಎಲ್ಲಾ ಭೂ ಮಂಜುರಾತಿಗಳನ್ನು ರದ್ದುಪಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಪಟ್ಟ ಹಾಗೂ ಸರ್ಕಾರಿ ಸಾಗುವಳಿ ಭೂಮಿಯನ್ನು ತ್ವರಿತ ಗತಿಯಲ್ಲಿ ಹಿಂದಿರುಗಿಸಬೇಕು. ಭೂ ಕಬಳಿಕೆ ಪ್ರಕರಣವನ್ನು ತಾವು ನಿರ್ಲಕ್ಷಿಸಿದಲ್ಲಿ ತಮ್ಮ ಆಡಳಿತದ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಬೆಟ್ಟದಜ್ಜ ಬಸಾಪೂರ, ವೆಂಕಟೇಶ ಚಿಲ್ಕರಾಗಿ, ಮಾರುತಿ ಜಿನ್ನಾಪೂರ, ಮಾಳಪ್ಪ, ಆಮರೇಶ ಪಾಮನಕಲ್ಲೂರು, ಹುಲುಗಪ್ಪ ಚಿಲ್ಕರಾಗಿ, ಬಾಲಸ್ವಾಮಿ ಇತರರಿದ್ದರು.

## ದ್ವಿತೀಯ ಪಿಯುಸಿ ಫಲಿತಾಂಶ: ಸರ್ಕಾರಿ ಅಲ್ಪಸಂಖ್ಯಾತರ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನಿಂದ ಉತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: 2025-2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ 1ರಲ್ಲಿ ಉತ್ತಮ ಫಲಿತಾಂಶ ಪಡೆದಿರುವ ರಾಯಚೂರಿನ ಬೋಳಮಾನದೊಡ್ಡಿಯ ಸರ್ಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು ಸಾಧನೆಗೈದಿದ್ದು, ವಿದ್ಯಾರ್ಥಿಗಳ ಈ ಸಾಧನೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ, ಕಾಲೇಜಿನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ವರ್ಗವು ವರ್ಷ ವ್ಯಕ್ತಪಡಿಸಿದೆ.**

ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇಕಡ 100 ಮತ್ತು ವಾಣಿಜ್ಯ



ವಿಭಾಗದಲ್ಲಿ ಶೇಕಡ 97.82 ಸೇರಿದಂತೆ ಕಾಲೇಜಿನ ಒಟ್ಟು ಫಲಿತಾಂಶ ಶೇಕಡ 98.98 ರಷ್ಟು ಉತ್ತಮ ಸಾಧನೆ ಮಾಡಲಾಗಿದೆ. ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕು.ಸಾನಿಯಾ ಬೇಗಂ ತಂದೆ ಮದರ್ ಸಾಬ್ 600 ಅಂಕಗಳಿಗೆ 575 ಅಂಕಗಳನ್ನು ಪಡೆಯುವ ಮೂಲಕ ಶೇಕಡ 95.83 ಸಾಧನೆ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿನಿ ಭಾಗ್ಯಶ್ರೀ ತಂದೆ ಮೌನೇಶ 600ಕ್ಕೆ 574 ಅಂಕಗಳು ಪಡೆಯುವ ಮೂಲಕ ಶೇಕಡ 95.66, ಕು.ಶ್ವೇತಾ ತಂದೆ ಮೌನೇಶ 600ಕ್ಕೆ 568 ಅಂಕಗಳನ್ನು ಪಡೆಯುವ ಮೂಲಕ ಶೇಕಡ 94.66 ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ವಿದ್ಯಾರ್ಥಿನಿ ಕುಮಾರಿ ಅನ್ನಮ್ಮ ತಂದೆ ಶಾಂತಪ್ಪ 600 ಅಂಕಗಳಿಗೆ 575 ಅಂಕಗಳನ್ನು ಪಡೆಯುವ ಮೂಲಕ ಶೇಕಡ.95.83 ಸಾಧನೆ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಸಂಜನಾ 600ಕ್ಕೆ 574 ಅಂಕಗಳನ್ನು ಪಡೆಯುವ ಮೂಲಕ ಶೇಕಡ 95.66, ಕು. ಮಹೇಶ್ವರಿ 600ಕ್ಕೆ 573 ಅಂಕಗಳು ಪಡೆಯುವ ಮೂಲಕ ಶೇಕಡ 95.50 ಪಡೆದಿದ್ದಾರೆ. ಅನಿತಾ ತಂದೆ ಕರಿಯಪ್ಪ 600ಕ್ಕೆ 573 ಅಂಕಗಳಿಸಿರುತ್ತಾರೆ. 19 ವಿದ್ಯಾರ್ಥಿನಿಯರು ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ಉರ್ದು ವಿಷಯದಲ್ಲಿ 2, ಅರ್ಥಶಾಸ್ತ್ರ 3, ಇತಿಹಾಸ 1, ವ್ಯವಹಾರ ಅಧ್ಯಾಯನ 1, ಭೌತಶಾಸ್ತ್ರ 1 ವಿದ್ಯಾರ್ಥಿನಿಯರು 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ಪ್ರವೀಣ್‌ಕುಮಾರ, ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಬಾಶುಮಿಯ ಸಾಹುಕಾರ್ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿಯ ಸಭೆ ನಡೆಸಿದ ಶಾಸಕ ಜಿ ಹಂಪಯ್ಯ ನಾಯಕ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ವಿಧಾನಸಭಾ ಕ್ಷೇತ್ರದ ಮಾನ್ವಿ ನಗರದ ಬಾಶುಮಿಯ ಸಾಹುಕಾರ್ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಲಿರುವ ರಾಯಚೂರು ವಿಶ್ವವಿದ್ಯಾಲಯದ ಯುವಜನೋತ್ಸವ ಕಾರ್ಯಕ್ರಮದ ಯಶಸ್ವಿ ಆಯೋಜನೆಗಾಗಿ ಅಭಿವೃದ್ಧಿ ಸಮಿತಿಯ ಸಭೆಯನ್ನು ಶಾಸಕ ಜಿ. ಹಂಪಯ್ಯ ನಾಯಕ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.**

ಏಪ್ರಿಲ್ 27, 28 ಹಾಗೂ 29 ರಂದು ನಡೆಯಲಿರುವ ಯುವಜನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಕಾಲೇಜಿಗೆ ನ್ಯಾಕ್ ಸಮಿತಿ ಭೇಟಿ ಸಂದರ್ಭದಲ್ಲಿ ಎಲ್ಲರ ಸಮನ್ವಯದಿಂದ ಬಿ ಪ್ಲಸ್ ಗ್ರೇಡ್ ಲಭಿಸಿರುವುದು ಕಾಲೇಜಿನ ಶೈಕ್ಷಣಿಕ ಪ್ರಗತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಸುಮಾರು




187 ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸಾವಿರಾರು ಯುವಜನರು ಮಾನ್ವಿಗೆ ಆಗಮಿಸಲಿದ್ದಾರೆ. ಇದರಿಂದ ಮಾನ್ವಿ ನಗರಕ್ಕೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮಟ್ಟದಲ್ಲಿ ವಿಶೇಷ ಗುರುತಿನ ಅವಕಾಶ ದೊರೆಯಲಿದೆ ಎಂದು ಹೇಳಿದರು. ವಿದ್ಯಾರ್ಥಿಗಳಿಗೆ ಸಮರ್ಪಕ ವಸತಿ, ಶುದ್ಧ ಕುಡಿಯುವ ನೀರು, ಊಟ, ಸಾರಿಗೆ ಹಾಗೂ ಭದ್ರತಾ ವ್ಯವಸ್ಥೆ ಕಲ್ಪಿಸುವುದು ಅತ್ಯಂತ ಮುಖ್ಯವಾಗಿದ್ದು, ಸಂಬಂಧಿಸಿದ ಎಲ್ಲಾ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಗಳು, ಶಾಲಾ ಕಟ್ಟಡಗಳು ಹಾಗೂ ಖಾಸಗಿ ಸಂಸ್ಥೆಗಳ ಸಹಕಾರ ಪಡೆಯುವ ಕುರಿತು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪರೀಕ್ಷಾ ದಿನಾಂಕಗಳ ಗೊಂದಲ ಕುರಿತು ವಿಶ್ವವಿದ್ಯಾಲಯದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಕಾಲೇಜು ಪ್ರಾಂಶುಪಾಲರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಮಾತನಾಡಿದ ಸಿಂಡಿಕೇಟ್ ಸದಸ್ಯ ಜಿಶನ್ ಅಖಿಲ್ ಸಿದ್ದಿಕಿ, ಯುವಜನೋತ್ಸವವು ಮಾನ್ವಿಗೆ ಸಿಕ್ಕಿರುವ ಅಪರೂಪದ ಅವಕಾಶವಾಗಿದ್ದು, ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಶಿಕ್ಷಣ ಸಂಸ್ಥೆಗಳು ಒಂದಾಗಿ ಕಾರ್ಯನಿರ್ವಹಿಸಿದರೆ ರಾಜ್ಯಮಟ್ಟದಲ್ಲಿ ಮಾನ್ವಿಯ ಹೆಸರು ಮೂಡಿಬರುತ್ತದೆ ಎಂದು ಹೇಳಿದರು. ಸಿಡಿಸಿ ಸದಸ್ಯರಾದ ರೇವಣಸಿದ್ದಯ್ಯ ಹಿರೇಮಠ್, ನಿವೃತ್ತ ಶಿಕ್ಷಣಾಧಿಕಾರಿ ಡಿ.ಜೆ. ಕರ್ಕಿಹಳ್ಳಿ, ಆಂಜಿನೇಯ ನಸಲಾಪುರ ಸೇರಿದಂತೆ ಹಲವರು ಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಾಲೂಕು ಪಂಚ ಗ್ಯಾರಂಟಿಗಳ ಅಧ್ಯಕ್ಷ ಬಿ.ಕೆ. ಅಮರೇಶಪ್ಪ ವಕೀಲರು,

ಸೈಯದ್ ಅಕ್ಬರ್ ಪಾಷಾ ಹುಸೇನಿ, ಶ್ರೀಮತಿ ಮಧು ಕುಮಾರಿ ಪಾಂಡೆ, ವೆಂಕೋಬಯ್ಯ ಶೆಟ್ಟಿ, ಶಂಕರ್ ಜಗ್ಲಿ, ಸತ್ತರ್ ಬಂಗ್ಲೆವಾಲೆ, ತಾಲೂಕ ದಂಡಾಧಿಕಾರಿ ಭೀಮರಾಯ್ ರಾಮಸಮುದ್ರ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಾಮನೆ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಭಾಗಯ್ಯ ನಾಯಕ್, ಕೆಇಬಿ ಹಾಗೂ ಸಾರಿಗೆ ಇಲಾಖೆಯ ಅಧಿಕಾರಿಗಳು, ಕಾಲೇಜಿನ ಪ್ರಾಚಾರ್ಯ ಎ. ಎಲ್. ಈರಣ್ಣ, ಮಿನಾಜುಲ್ ಹಸನ್, ಮುಜೀಬ್ ಅಹಮದ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.